CC-O. In Public Domain. Digitized by eGangotri

553

ಬಳ್ಳಾರಿ ಬೀಚಿ

ಶಾ. ಮಂ. ಕೃಷ್ಣರಾಯ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

BALLARY BEECHI —A biography on B. Bheemasena Rao written in Kannada by S. M. Krishnaraya and Published by G. K. Ananthram for IBH Prakashana Gandhinagar Bangalore 560 009.

© by the Publisher 1984

ಬೆಲೆ : ರೂ. 2-00

ಮುಖಪುಟ : ಪ್ರಮೀಳಾ

ಒಳ ಚಿತ್ರಗಳು : ಲೇಖಕರು ಮತ್ತು
ಕೆ. ಜಿ. ಸೋಮಶೇಖರ್

ಮೊದಲ ಮುದ್ರಣ : 1984. ಪ್ರಕಾಶಕರು : ಐಬಿಎಚ್ ಪ್ರಕಾಶನ ಇವರ ಪರವಾಗಿ ಜಿ. ಕೆ. ಅನಂತರಾಮ್ ಐದನೆಯ ಮುಖ್ಯರಸ್ತೆ, ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಳ್ಳಾರಿ ಬೀಚಿ

ನಮ್ಮ ಕರ್ನಾಟಕ ರಾಜ್ಯದಲ್ಲಿ ಹತ್ತೊಂಬತ್ತು ಜಿಲ್ಲೆಗಳಿವೆ. ಅವುಗಳಲ್ಲಿ ಬಳ್ಳಾರಿ ಜಿಲ್ಲೆಯೂ ಒಂದು. ಮೊದಲು ಈ ಜಿಲ್ಲೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿತ್ತು. ಭಾಷೆಗಳ ಆಧಾರದ ಮೇಲೆ ರಾಜ್ಯಗಳ ಪುನರ್‌ರಚನೆಯಾದಾಗ ಬಳ್ಳಾರಿ ಜಿಲ್ಲೆ ಕರ್ನಾಟಕಕ್ಕೆ ಸೇರಿತು.

ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ ಎಂಬುದು ಒಂದು ಊರು. ಅಲ್ಲಿ ರಾಯಸಂ ಶ್ರೀನಿವಾಸರಾಯ ಹಾಗೂ ಭಾರತಮ್ಮ ಎಂಬ ದಂಪತಿಗಳು ಇರುತ್ತಿದ್ದರು. ಶ್ರೀನಿವಾಸರಾಯರು ವೃತ್ತಿಯಿಂದ ಶಾನುಭೋಗರಾಗಿದ್ದರು. ಸರಕಾರದ ಸೇವೆಯನ್ನು-ಜನರ ಹಿತಚಿಂತನೆಯನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಇವರು ಮಧ್ವಾಚಾರ್ಯರ ಮಧ್ವ ಮತಾನುಯಾಯಿಗಳಾಗಿದ್ದ ಬ್ರಾಹ್ಮಣರು. 'ಬೀಚಿ' ಎಂಬ ಕಾವ್ಯನಾಮವನ್ನು ಹೊಂದಿದ್ದ ರಾಯಸಂ ಭೀಮಸೇನರಾಯರು ಶ್ರೀನಿವಾಸರಾಯರ ಎರಡನೆಯ ಮಗ. ಇವರು ಹರಪನಹಳ್ಳಿಯಲ್ಲಿ 1913ರ ಏಪ್ರಿಲ್ 23ರಂದು ಹುಟ್ಟಿದರು.

ಶ್ರೀನಿವಾಸರಾಯರಿಗೆ ಮೂವರು ಮಕ್ಕಳು. ಹಿರಿಯ ಮಗಳು ಲಕ್ಷ್ಮಿ. ಹಿಂದುಗಳಲ್ಲಿ ಲಕ್ಷ್ಮಿ ಎಂದರೆ ಭಾಗ್ಯೋದಯದ ಸಂಕೇತ. ಲಕ್ಷ್ಮಿಯ ಹುಟ್ಟಿನೊಂದಿಗೆ ಶ್ರೀನಿವಾಸರಾಯರ ಭಾಗ್ಯದ ಬಾಗಿಲು ತೆರೆಯಿತು. ಕೆಲಸದಲ್ಲಿ ಬಡತಿ ಸಿಕ್ಕಿತು. ಕೈತುಂಬ ಹಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಬರಲಾರಂಭಿಸಿತು. ಮನೆಯಲ್ಲಿ ಸುಖ–ಸಮಾಧಾನ ಪಸರಿಸಿತು. ಕೈಗೊಬ್ಬ ಕಾಲಿಗೊಬ್ಬ ಕೆಲಸದಾಳುಗಳು. ಶ್ರೀನಿವಾಸರಾಯರು ಮನೆಯಲ್ಲೊಂದು ಬಿಳಿಯ ಕುದುರೆಯನ್ನೂ ಸಾಕಿದ್ದರು. ಹಿರಿಯರು ಸಂಪಾದಿಸಿಟ್ಟ ಸ್ವಲ್ಪ ಜಮೀನೂ ಇತ್ತು. ಲಕ್ಷ್ಮಿಯ ನಂತರ ಒಬ್ಬ ಮಗ ಹುಟ್ಟಿದ. ಚೆನ್ನಾರ ಚೆಲುವನಾದ ಮುದ್ದುಮುಖದ ಆ ಗಂಡು ಮಗುವಿಗೆ ಹಯವದನ ಎಂದು ಹೆಸರಿಟ್ಟರು. 'ಹಯ' ಎಂದರೆ ಕುದುರೆ, 'ವದನ' ಎಂದರೆ ಮುಖ. ಹಯವದನ ಎಂಬುದು ದೇವರ ಹೆಸರು. ಹಯವದನ ಹುಟ್ಟಿದ ಬಳಿಕ ಮನೆಯಲ್ಲಿ ಬಡತನ ಕಾಲಿಟ್ಟಿತು. ಹಯವದನ ಹುಟ್ಟಿದ ಮೂರು ವರ್ಷಗಳ ನಂತರ ಇನ್ನೊಂದು ಗಂಡು ಮಗು ಹುಟ್ಟಿತು. ಕಡ್ಡಿ ಪೈಲವಾನನಂತಿದ್ದ ಈ ಮಗುವಿಗೆ 'ಭೀಮಸೇನ' ಎಂದು ಹೆಸರಿಟ್ಟಾಗಲೇ ಈ ಮಗು ಪ್ರಾಯಃ ನಗತೊಡಗಿರಬೇಕು! ಮುಂದೆ ಇದೇ ಭೀಮಸೇನ 'ಬೀchi' ಎಂಬ ಕಾವ್ಯನಾಮದಿಂದ ಕನ್ನಡ ಸಾಹಿತ್ಯ ಕ್ಷಿತಿಜದಲ್ಲಿ ಮಿಂಚಿದ. ತಾನೂ ನಕ್ಕು ಇತರರನ್ನೂ ನಗಿಸಿದ.

ಇಟ್ಟ ಹೆಸರು ಉದ್ದವಾದರೆ ಅದನ್ನು ಮೊಟಕುಗೊಳಿಸಿ ಮುದ್ದಿನಿಂದ ಕರೆಯುವುದುಂಟು. ಹೀಗೆ ರೂಢಿಯಲ್ಲಿ ಕೃಷ್ಣನಿಗೆ–ಕಿಟ್ಟೀ, ನಾರಾಯಣನಿಗೆ–ನಾಣೀ, ಲಕ್ಷ್ಮಣ–ಲಚ್ಚೂ ಆಗುವಂತೆ ಹಿರಿಯರ ಬಾಯಿಯಲ್ಲಿ ಭೀಮಸೇನ 'ಬೀಚಿ'ಯಾದರು. ಆಗ ಹಿರಿಯರು ಮುದ್ದಿನಿಂದ ಇಟ್ಟ ಹೆಸರು ಕನ್ನಡ ಸಾಹಿತ್ಯದಲ್ಲೂ ಪ್ರೀತಿಯ ಮೆಚ್ಚಿನ ಹೆಸರಾಗಿ ಉಳಿಯಿತು.

ಬೀಚಿ ಹುಟ್ಟುವಾಗಲೇ ತಂದೆಯನ್ನು ಕಳೆದುಕೊಂಡರು. ತಾಯಿ ಭಾರತಮ್ಮನ ದುಃಖ ಹೇಳತೀರದು. ಮೂವರು ಪುಟ್ಟ ಮಕ್ಕಳು. ಹಿರಿಯರಿಂದ ಬಂದ ಹೊಲಗಳಿದ್ದವು. ಅವು ಒಣ ಹೊಲಗಳು. ಬರುವ ಅಲ್ಪಸ್ವಲ್ಪ ಬೆಳೆ ಎರಡು ತಿಂಗಳಿಗೂ ಸಾಕಾಗುತ್ತಿರಲಿಲ್ಲ. ಎಷ್ಟೇ ಕಷ್ಟ ಬಂದರೂ ಅಂದಿನ ಕಾಲದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಂಗಸರು ಹೊಸ್ತಿಲು ದಾಟಿ ಹೊರಗೆ ಹೋಗುತ್ತಿರಲಿಲ್ಲ. ಅದೂ ಬ್ರಾಹ್ಮಣರ ಹೆಂಗಸರು ಕೆಲಸಕ್ಕೆ ಹೋದರೆ ಅವರ ಮೇಲೆ ಇಲ್ಲ ಸಲ್ಲದ ಗೂಬೆ ಕೂರಿಸುತ್ತಿದ್ದರು. ಅದರಲ್ಲೂ ವಿಧವೆಯಾದವಳು ಸಮಾಜಕ್ಕೆ ಮುಖ ತೋರಿಸುವುದೇ ಒಂದು ಅಪರಾಧ ! ವಿಧ ವೆಯ ಮುಖ ನೋಡಿದರೆ ಅಪಶಕುನ ಎಂಬ ಅಂಧಶ್ರದ್ಧೆ ರೂಢಿ ಯಲ್ಲಿದ್ದ ಕಾಲ ಅದು. ಮಗಳನ್ನು ಕೆಲಸಕ್ಕೆ ಕಳಿಸುವುದೇ ? ಅವ ಳಿನ್ನೂ ಚಿಕ್ಕವಳು. ಭೂಮಿಯಿಂದ ಬರುವ ಅಲ್ಪಸ್ವಲ್ಪ ಆದಾ ಯದ ಮೇಲೆ ಭಾರತಮ್ಮನ ಸಂಸಾರ ಸಾಗಬೇಕು. ತುಂಬು ಪ್ರಾಯದಲ್ಲಿ ಗಂಡನನ್ನಗಲಿದ ದುಃಖ, ಬಡತನದ ಬವಣೆ, ಅವ ರಿವರ ಚುಚ್ಚು ಮಾತುಗಳ ಜೊತೆಗೆ ಭಾರತಮ್ಮನಿಗೆ ಕ್ಷಯ ರೋಗವೂ ತಗುಲಿತು.

ಆಗ ಹರಪನಹಳ್ಳಿಯಲ್ಲಿ ಒಂದೇ ಶಾಲೆಯಿತ್ತು. ಬಳ್ಳಾರಿ ಜಿಲ್ಲೆ ಕರ್ನಾಟಕ-ತಮಿಳುನಾಡುಗಳ ಮಧ್ಯೆ ಸೇತುವೆಯಂತೆ ನಿಂತಿತ್ತು. ಬಳ್ಳಾರಿಯಲ್ಲಿ ಜನಸಾಮಾನ್ಯರೆಲ್ಲ ಆಡುತ್ತಿದ್ದ ಭಾಷೆ ತೆಲುಗು. ಬರೆಯುವ ಭಾಷೆಯೂ ಅದೇ. ಕನ್ನಡದವರು ಕನ್ನಡ ವನ್ನು ಮನೆಯಲ್ಲಿ ಮಾತ್ರ ಮಾತಾಡುತ್ತಿದ್ದರು. ಇಂಥ ಪರಿಸರ ದಲ್ಲಿದ್ದ ಆ ಶಾಲೆಗೆ ಬೀಚಿ-ಹಯವದನರಿಬ್ಬರೂ ಸೇರಿದರು.

ಬೀಚಿ ತಾಯಿಗೆ ಮುದ್ದಿನ ಮಗ. ಚಿಕ್ಕಪುಟ್ಟ ಕಿರುಕುಳ ಮಾಡಿ ಲಕ್ಷ್ಮಿ ಹಾಗೂ ಹಯವದನರು ಆಗಾಗ್ಗೆ ತಾಯಿಯಿಂದ ಏಟು ಪಡೆಯುತ್ತಿದ್ದರು. ಆದರೆ ಬೀಚಿ ಮಾತ್ರ ಅಪ್ಪಿ ತಪ್ಪಿ ಎಂದಾದರೊಮ್ಮೆ ತಾಯಿಯ ಏಟಿಗೆ ಗುರಿಯಾಗುತ್ತಿದ್ದ. ಮೈಗೆ ಸ್ವಲ್ಪ ಕೈಹಚ್ಚಿದರೂ ಸಾಕು ದೊಡ್ಡ ರಂಪಾಟ ಮಾಡಿ ಜನರನ್ನು ಕೂಡಿಸುತ್ತಿದ್ದ. ಯಾರಾದರೂ ಗದರಿಸಿದರೂ ಸಾಕು—ಬೀಚಿ ಜೋರಾಗಿ ಅಳುತ್ತಿದ್ದ.

ಒಂದು ದಿನ ಬೀಚಿ ತಪ್ಪುಮಾಡಿ ತಾಯಿಯ ಕೈಗೆ ಸಿಕ್ಕು

Sri Vidyabharathi Book Centre, Sringeri

CC-O. In Public Domain. Digitized by eGangotri

ಬಿದ್ದ. ಭಾರತಮ್ಮ ಬೀಚಿಗೆ ಥಳಿಸಿದಳು. ಮುದ್ದಿನಿಂದ ಮುತ್ತಿಕ್ಕು ತ್ತಿದ್ದ ತನ್ನನ್ನು ಹೊಡೆಯುವುದೇ ? ಬೀಚಿಯ ಕೋಪ ನೆತ್ತಿ ಗೇರಿತು. ತಾಯಿಗೆ ಬುದ್ಧಿ ಕಲಿಸಲೇಬೇಕು ಎಂಬ ಹಠದಿಂದ ದಾಪುಗಾಲು ಹಾಕುತ್ತ ಒಂದು ಬಾವಿಯ ಕಡೆ ಹೋದ. ತಾನು ಬಾವಿಯಲ್ಲಿ ಬಿದ್ದು ಪ್ರಾಣ ಕಳೆದುಕೊಂಡರೆ ತಾಯಿಗೆ ಬುದ್ಧಿ ಬರುತ್ತದೆಯೆಂಬುದು ಬೀಚಿಯ ಭಾವನೆ. ಬಾವಿಯ ಹತ್ತಿರ ಬಂದು ಬಾವಿಯಲ್ಲಿ ನೀರಿದೆಯೆ ಎಂದು ಬಾಲಕ ಬೀಚಿ ಹಣಿಕಿ ನೋಡಿದ. ಬಾವಿಯ ಮೆಟ್ಟಿಲಿನ ಮೇಲೆ ಒಂದು ನಾಗರ ಹಾವು ಹಾಯಾಗಿ ಮಲಗಿತ್ತು. ಬೀಚಿ ಮೊದಲು ನೀರು ನೋಡಲಿಲ್ಲ. ಹಾವು ನೋಡಿದ ! ಭಯದಿಂದ ಮೈ ಬೆವರಿತು, ಗಂಟಲೊಣಗಿತು, ಕಾಲುಗಳು ಥರಥರ ಕಂಪಿಸಿದುವು. ಬಾವಿಯಲ್ಲಿ ಜಿಗಿಯುವ ವಿಚಾರವೇ ಮರೆತುಹೋಯಿತು. ಬದುಕಿದರೆ ಬೇಡಿಯಾದರೂ ತಿಂದೇನು ಎಂದು ಬೀಚಿ ಕಾಲಿಗೆ ಬುದ್ಧಿ ಹೇಳಿದ. ಮನೆಗೆ ಬಂದು ನೀರು ಕುಡಿದು ತಾಯಿಯ ಬಳಿ ಮಲಗಿದ.

ಅಂದಿನ ಕಾಲದಲ್ಲಿ ತೆಲುಗು ನಾಟಕಗಳನ್ನು ಬಳ್ಳಾರಿ ಜಿಲ್ಲೆ ಯಲ್ಲಿ ಆಡುತ್ತಿದ್ದರು. ಹರಪನಹಳ್ಳಿಗೆ ಒಂದು ಪ್ರಸಿದ್ಧ ನಾಟಕ ಕಂಪನಿ ಬಂದಿತ್ತು. ನಾಟಕ-ಬಯಲಾಟಗಳೆಂದರೆ ನೋಡಿ ಖುಷಿ ಪಡುತ್ತಿದ್ದ ಬೀಚಿ, ಒಮ್ಮೆ ಪಕ್ಕದ ಮನೆಯವರೊಂದಿಗೆ ನಾಟಕ ನೋಡಲು ಹೋದ. ಆ ಪಾತ್ರಗಳ ಬಣ್ಣ ಬಣ್ಣದ ವೇಷ ಭೂಷಣ-ಕಿರೀಟ-ಭುಜಕೀರ್ತಿಗಳು, ದೃಶ್ಯಾವಳಿ, ಸಂಗೀತ ಸಂಭಾ ಷಣೆಗಳಿಂದ ಪ್ರಭಾವಿತನಾದ ಬೀಚಿ ಮನೆಗೆ ಬರುವಾಗಲೇ ತಾನೂ ಹೀಗೆಯೇ ನಾಟಕ ಆಡಿ ಭೇಷ್ ಅನ್ನಿಸಿಕೊಳ್ಳಬೇಕೆಂದುಕೊಂಡ.

ಮರುದಿನ ಶಾಲೆಗೆ ಹೋದವನೇ ಎಲ್ಲ ಗೆಳೆಯರಿಗೂ ನಾಟಕದ ಕಥೆ ಹೇಳಿ ಎಲ್ಲರೂ ಸೇರಿ ನಾಟಕ ಆಡೋಣ ಎಂದು ಹುರಿದುಂಬಿಸಿದ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಲೆಯ ಮಕ್ಕಳೆಲ್ಲ ಸೇರಿ 'ಕೀಚಕವಧೆ' ನಾಟಕ ಅಭಿನಯಿಸುವುದೆಂದು ಗೊತ್ತಾಯಿತು. ಗೆಳೆಯನೊಬ್ಬನ ಮನೆಯ ಪಡಸಾಲೆಯೇ ರಂಗಭೂಮಿ. ಅವರಿವರ ಮನೆಯ ಚಾದರ್, ಕಂಬಳಿ, ಸೀರೆಗಳನ್ನು ತಂದು ಕಟ್ಟಿ ರಂಗಮಂಟಪ ತಯಾರಿಸಿದರು. ಎಲ್ಲರ ಮುಖಕ್ಕೂ ಅರದಾಳದ ಹಳದಿ ಬಣ್ಣ, ಮೀಸೆ, ಹುಬ್ಬು ಬರೆಯಲು ಇಜ್ಜಲು, ಕೆಂಪುಕಲ್ಲಿನ ತುಟಿಬಣ್ಣ ಹಚ್ಚಿಕೊಂಡು ಅವರಿವರಿಂದ ಕೇಳಿ ತಂದ ಬಟ್ಟೆ, ಬೇಗಡಿ, ಕಾಗದದ ಕಿರೀಟ ಧರಿಸಿ ಪಾತ್ರಧಾರಿಗಳೆಲ್ಲ ಸಿದ್ಧರಾಗಿ ನಿಂತರು. ಶಾಲೆಯ ಪ್ರಾರ್ಥನೆಯನ್ನೇ ನಾಂದಿಯನ್ನಾಗಿ ಹಾಡಿದ ಬಳಿಕ ಭೀಮ ಮತ್ತು ಕೀಚಕ ರಂಗಭೂಮಿಗೆ ಬಂದರು. ಬೀಚಿ ಕೀಚಕನ ಪಾತ್ರದಲ್ಲಿ ಬಂದು ನಿಂತಾಗ ಭೀಮನ ಪಾತ್ರಧಾರಿ ಮಾತು ಆರಂಭಿಸಿದ.

"ಎಲೈ ನೀಚರಾಕ್ಷಸನಾದ ಕೀಚಕಾಸುರಾ ! ಖೂಳಾ, ನನ್ನ ಹೆಂಡತಿಯಾದ ದ್ರೌಪದಾದೇವಿಯನ್ನು ಸತಾಯಿಸುವೆಯಾ ? ನಿನ್ನನ್ನು ಈ ಕೂಡಲೇ ಕೊಂದು, ಅನಂತರ ಸಂಹರಿಸಿ ಚಟ್ನಿ ಮಾಡಿಬಿಡುವೆನು"—ಎಂದು ಆರ್ಭಟಿಸುತ್ತ ಭೀಮ ಕೀಚಕನ ಮೈಮೇಲೆ ಏರಿ ಬಂದ. ಅನಂತರ ಕೀಚಕನ ಹಾಡು. ಕೀಚಕನ ಹಾಡು ಮುಗಿಯುವಷ್ಟರಲ್ಲಿ ಭೀಮ ಕೀಚಕನ ಕೆನ್ನೆಗೊಂದು ಫಟಾರನೆ ಹೊಡೆದ. ಕೆನ್ನೆಗೆ ಏಟು ಬಿದ್ದುದೇ ತಡ ಬೀಚಿಯ ಅಪಾದಮಸ್ತಕ ಬಿಸಿಯಾಯಿತು. ಸ್ವಾಭಿಮಾನ ಹೆಡೆಯೆತ್ತಿತ್ತು. ಅಷ್ಟೆಲ್ಲ ಪ್ರೇಕ್ಷಕರ ಮುಂದೆ ಹೊಡೆಯುವುದೇ ? ತಾನು ಕೀಚಕನ ಪಾತ್ರಧಾರಿಯೆಂಬುದು ಮರೆತುಹೋಯಿತು. ಒಂದೇ ಕ್ಷಣದಲ್ಲಿ ಕೀಚಕ ಭೀಮನ ಹೊಟ್ಟೆಗೆ ಎರಡು–ಮೂರು ಬಾರಿ ಗುದ್ದಿದ. ಭೀಮ 'ಅಯ್ಯೊಯ್ಯೋ !' ಎನ್ನುತ್ತ ಅಲ್ಲಿಯೇ ಕುಸಿದು ಬಿದ್ದ. 'ಕೀಚಕವಧಾ' ನಾಟಕ ಆಗಬೇಕಾದುದು 'ಭೀಮಸೇನವಧಾ' ಆಯಿತು.

ನೆಲಕ್ಕುರುಳಿದ ಭೀಮಸೇನನನ್ನು ಎತ್ತಿ ತಂದು ಬಟ್ಟೆ ಸಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಲಿಸಿ, ಗಾಳಿ ಬೀಸಿ, ಕಾಫಿ ಕುಡಿಸಿ ಉಪಚಾರ ಮಾಡಿದರು. ಭೀಮ ನನ್ನೇ ಗುದ್ದಿ, ಕೆಡವಿದ ಕೀಚಕನ ಪರಾಕ್ರಮವನ್ನು ಯಾರೋ ಅವನ ತಾಯಿಗೆ ಹೇಳಿದರು. ಭಾರತಮ್ಮ ಕಿಡಿಕಿಡಿಯಾಗಿ ಕೈಯಲ್ಲಿ ಕೋಲು ತೆಗೆದುಕೊಂಡು ರಂಗಮಂಟಪಕ್ಕೆ ಬಂದರು. ಕೀಚಕ ಕಕ್ಕಾಬಿಕ್ಕಿಯಾಗಿ ನಿಂತಿದ್ದ. ಭಾರತಮ್ಮ ಕೀಚಕನ ವೇಷದಲ್ಲಿದ್ದ ಬೀಚಿಯ ರಟ್ಟೆ ಹಿಡಿದು, ಥಳಿಸುತ್ತ, ಅದೇ ಬಣ್ಣ–ವೇಷದಲ್ಲಿ ದರದರನೆ ಎಳೆದುಕೊಂಡು ಬೀದಿಯಲ್ಲಿ ನಡೆದರು. ಬಾಲ ಕೀಚಕನ ಮೆರವಣಿಗೆ ಬೀದಿಯಲ್ಲಿ ನೋಡಿದ ಜನ ಹೊಟ್ಟೆ ತುಂಬ ನಕ್ಕರು.

ತಾಯಿಯ ಅಂಜಿಕೆಯಿಂದ ಕೆಲವು ಕಾಲ ನಾಟಕ ಆಡು ವುದು ತಪ್ಪಿತು. ಆದರೆ ಶಾಲೆಯಲ್ಲಿ, ಆಟದ ಬಯಲಿನಲ್ಲಿ ಬೇರೆ ಬೇರೆ ಧ್ವನಿಗಳಲ್ಲಿ ಅನುಕರಣೆ ಮಾಡಿ ಗೆಳೆಯರನ್ನು ನಗಿಸುವುದು ಮಾತ್ರ ಆತ ಬಿಡಲಿಲ್ಲ. ಇದರಿಂದಾಗಿ ಬೀಚಿಯಿದ್ದಲ್ಲಿ ಸ್ನೇಹಿತರ ಗುಂಪು ಸೇರುತ್ತಿತ್ತು. ಬೀಚಿಯಿದ್ದಲ್ಲಿ ನಗೆಯ ಅಲೆ ಅಲೆಗಳು ತೇಲಿಬಂದು ಮನರಂಜನೆಯನ್ನು ಉಂಟುಮಾಡುತ್ತಿತ್ತು.

ಭಾರತಮ್ಮ ತನ್ನ ಮಗಳು ಲಕ್ಷ್ಮಿಯನ್ನು ತನ್ನ ಕಿರಿಯ ಸಹೋದರ ಕೃಷ್ಣಾಚಾರ್ಯರಿಗೆ ಕೊಟ್ಟು ಮದುವೆ ಮಾಡಿದಳು. ಹೆಬ್ಬಾವಿನಂತೆ ನಿತ್ಯವೂ ನುಂಗುವ ಬಡತನ, ಬರಡು ಭೂಮಿ ಯಿಂದ ಬರುವ ಸೊನ್ನೆ ಆದಾಯ ಬೆಳೆಯುವ ಮಕ್ಕಳಿಗೆ ಹೊಟ್ಟೆ ತುಂಬ ಊಟ ಹಾಕಲೂ ಸಾಧ್ಯವಾಗದ ಸಂಕಟ, ಕರುಣೆ ಯಿಲ್ಲದೆ ಕಾಡುವ ಕ್ಷಯರೋಗ, ಮೇಲಾಗಿ ದಾಯಾದಿಗಳ ಕೊಳಕು ಮಾತುಗಳನ್ನು ಕೇಳುತ್ತ ಸಾವಿನ ದವಡೆಯಲ್ಲಿ ನುಗ್ಗುತ್ತಿದ್ದ ಭಾರತಮ್ಮ ಒಂದು ದಿನ ಕಣ್ಣುಮುಚ್ಚಿದರು. ಆಗ ಬೀಚಿಗೆ ಕೇವಲ 6–7 ವರ್ಷ ವಯಸ್ಸು. ತಂದೆಯ ಅಕ್ಕ ರಿಂದಮ್ಮ ಮೊದಲಿನಿಂದಲೂ ಬೀಚಿಯನ್ನು ತನ್ನ ಮಡಿಲಲ್ಲಿಟ್ಟು ಆಡಿಸಿದ ವಳು. ಭಾರತಮ್ಮನಿಗೆ ಕ್ಷಯರೋಗ ಅಂಟಿದ್ದರಿಂದ ಆ ರೋಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳಿಗೂ ಅಂಟಬಾರದು ಎಂಬ ಮುಂಜಾಗರೂಕತೆಯಿಂದ ರಿಂದಮ್ಮ ಬೀಚಿಯನ್ನು ತನ್ನ ಮನೆಗೆ ಕರೆದೊಯ್ದು ಆಟ ಆಡಿಸುತ್ತಿದ್ದಳು. ಆದರೆ ಹಯವದನರಾಯ ಮಾತ್ರ ವಾರಾನ್ನ ಉಂಡು ಬದುಕುತ್ತಿದ್ದ.

ತಾಯಿ ಗತಿಸಿದ ತಬ್ಬಲಿ ಮಕ್ಕಳನ್ನು ರಿಂದಮ್ಮ ಕರೆದೊಯ್ದು ಸಾಕಿದಳು. ರಿಂದಮ್ಮನ ಮಗ ಮಠದ ಹನುಮಂತಾಚಾರ್ಯರು ಮಂತ್ರಾಲಯ ರಾಘವೇಂದ್ರ ವೃಂದಾವನದ ಅರ್ಚಕರಾಗಿದ್ದರು. ಎತ್ತರದ ಆಳು, ನೀಳವಾದ ತೋಳುಗಳು, ಮಿಲಿಟರಿಗಾಗಿ ಮಾಡಿಸಿದಂತಹ ದೇಹ. ಆಚಾರ–ವಿಚಾರ, ಸಂಪ್ರದಾಯ–ಶಿಷ್ಟಾಚಾರಗಳಲ್ಲಿ ಕರ್ಮಠ ಬ್ರಾಹ್ಮಣರು.

ತಾಯಿ ಸತ್ತರೂ, ಏಟುಗಳು ತಪ್ಪಲಿಲ್ಲ. ಬೀಚಿಯ ತುಂಟತನ ಬಹಳ. ಏನಾದರೊಂದು ಮಾಡಿ ಬೀಚಿ ಹನುಮಂತಾಚಾರ್ಯರಿಂದ ಹೊಡೆತ ತಿನ್ನುತ್ತಿದ್ದ. ತಬ್ಬಲಿಯಾದ ಮಕ್ಕಳು ಉಡಾಳ ಹುಡುಗರಾಗಿ ಬದುಕಬಾರದು ಎಂಬ ಒಳ್ಳೆಯ ಉದ್ದೇಶದಿಂದಲೇ ಅವರು ಹೊಡೆಯುತ್ತಿದ್ದರು.

ಎಲ್ಲಕ್ಕಿಂತ ಹೆಚ್ಚಿನ ಮುದ್ದಿನಿಂದ ಪ್ರೀತಿಸುತ್ತಿದ್ದ ರಿಂದತ್ತೆ ಕೂಡ ಒಮ್ಮೊಮ್ಮೆ ಬೀಚಿಗೆ ಒಂದೆರಡು ಏಟುಗಳನ್ನು ಸಿಟ್ಟಿನ ಭರದಲ್ಲಿ ಕೊಡುತ್ತಿದ್ದುದುಂಟು. ಆದರೆ ತಕ್ಷಣವೇ ಈತ ತನ್ನ ಸತ್ತ ತಮ್ಮನ ಅನಾಥ ಮಗು ಎಂಬ ಕರುಣೆಯಿಂದ ಒಳಗೆ ಕರೆದೊಯ್ದು ಲಾಲಿಸಿ ಅರಳು ಹಿಟ್ಟು ಬೆಲ್ಲ ಕೊಟ್ಟು ಸಮಾಧಾನ ಮಾಡುತ್ತಿದ್ದಳು. ಈ ಗುಟ್ಟು ತಿಳಿದ ಬೀಚಿ ತನಗೆ ಅರಳು–ಬೆಲ್ಲ ಬೇಕಾದಾಗಲೆಲ್ಲ ಏನಾದರೊಂದು ಗದ್ದಲ ಮಾಡಿ ರಿಂದತ್ತೆಯಿಂದ ಏಟು ಗಿಟ್ಟಿಸುತ್ತಿದ್ದ.

ಅಂದಿನ ಕಾಲದಲ್ಲಿ ತುಂಬ ಮಡಿ–ಮೈಲಿಗೆಯಲ್ಲಿರುತ್ತಿದ್ದ ಅರ್ಚಕರು ಹೋಟೇಲಿಗೆ ಹೋಗಿ ಚಹ–ಕಾಫಿ ಕುಡಿಯುತ್ತಿರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಮನೆಯ ತಿಂಡಿ-ತಿನಿಸುಗಳನ್ನೂ ಬಿಟ್ಟು ಬೇರೆ ಏನೂ ತಿನ್ನುತ್ತಿರಲಿಲ್ಲ. ಇದಕ್ಕೆ ಕಾರಣ ಅಂದು ರೂಢಿಯಲ್ಲಿದ್ದ ಮಡಿವಂತಿಕೆಯ ಮನೋಭಾವ ಹಾಗೂ ಸಂಪ್ರದಾಯಬದ್ಧ ಜೀವನ.

ಬೀಚಿಯ ಸ್ನೇಹಿತರಲ್ಲಿ ಅನೇಕರು ವೀರಶೈವರಿದ್ದರು. ಅವರು ಆಗಾಗ್ಗೆ ಹೊಟೇಲಿಗೆ ಹೋಗಿ ಈರುಳ್ಳಿ ಪಲ್ಲೆಯನ್ನೂ ಸೇರಿಸಿಕೊಡುತ್ತಿದ್ದ ಮಸಾಲೆದೋಸೆ ತಿನ್ನುತ್ತಿದ್ದರು. ಒಂದೆರಡು ಬಾರಿ ಅವರು ಬೀಚಿಯನ್ನು ಕರೆದೊಯ್ದು ಮಸಾಲೆದೋಸೆ ಕೊಡಿಸಿದ್ದರು. ಹೀಗೆ ಒಮ್ಮೆ ಮಸಾಲೆದೋಸೆ ತಿಂದು ಬಂದಾಗ ಈರುಳ್ಳಿಯ ವಾಸನೆ ಹನುಮಂತಾಚಾರ್ಯರ ಮೂಗಿಗೆ ಬಡಿಯಿತು. ಬ್ರಾಹ್ಮಣರಲ್ಲಿ ಹುಟ್ಟಿದ ಬೀಚಿ ಈರುಳ್ಳಿ ತಿಂದು ಕುಲಗೆಟ್ಟು ಹೋದ ಎಂಬ ಕೋಪದಿಂದ ಬೀಚಿಗೆ ಚೆನ್ನಾಗಿ ಥಳಿಸಿದರು. ಆದರೆ ಬೀಚಿ ದೋಸೆ ತಿನ್ನುವುದನ್ನು ಮಾತ್ರ ಬಿಡಲಿಲ್ಲ.

ಮುಂದಿನ ಓದು

ಪ್ರಾಥಮಿಕ ಶಾಲೆಯಲ್ಲಿ ತೆಲುಗು ಕಲಿತ ಬೀಚಿ ಮಾಧ್ಯಮಿಕ ಶಾಲೆಗೆ ಹೋದಾಗ ಅಲ್ಲಿ ತೆಲುಗು ಅಥವಾ ಕನ್ನಡ ಮಾಧ್ಯಮ ಆಯ್ಕೆ ಮಾಡಬೇಕಾಗಿತ್ತು. ಎಲ್ಲ ಸಹಪಾಠಿಗಳು ತೆಲುಗು ಆಯ್ಕೆ ಮಾಡಿದಾಗ ಬೀಚಿಯವರೂ ತೆಲುಗು ಮಾಧ್ಯಮದಲ್ಲಿ ಮುಂದುವರಿದರು. ಮುಂದೆ ಅದು ಪ್ರೌಢಶಾಲೆಯ ಮಟ್ಟದಲ್ಲಿ ಕಠಿಣವೆಂದು ತೋರಿದಾಗ ಸಂಸ್ಕೃತವನ್ನು ಆಯ್ಕೆಮಾಡಿಕೊಂಡರು.

ಬೀಚಿಯವರಿಗೆ ಶಾಲೆಯಲ್ಲಿ ಸಂಸ್ಕೃತ ಪಾಠ ಹೇಳಿಕೊಡುವ ನೀಲಕಂಠಶಾಸ್ತ್ರಿಗಳು ಘನ ವಿದ್ವಾಂಸರು ಕಾಶಿಯಲ್ಲಿದ್ದು ಸಂಸ್ಕೃತ ಕಲಿತು ಬಂದವರು. 'ಪಾರ್ವತಿ ಪರಿಣಯ' 'ದಶಕುಮಾರ ಚರಿತೆ' ಮೊದಲಾದ ಪಠ್ಯ ಪುಸ್ತಕಗಳನ್ನು ಕಣ್ತೆರೆದು ನೋಡದೆಯೇ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರರ್ಗಳವಾಗಿ ಪಾಠ ಮಾಡುತ್ತಿದ್ದರು. ಬೀಚಿಯು ಹತ್ತಿರ ಸಂಸ್ಕೃತ ಪುಸ್ತಕವೇ ಇರಲಿಲ್ಲ. ಅವರಿವರಿಂದ ಪಡೆದು ಓದಬೇಕಾಗುತ್ತಿತ್ತು. ಅದರಿಂದ ಚೆನ್ನಾಗಿ ಓದಲು ಆಗುತ್ತಿರಲಿಲ್ಲ. ಇದನ್ನು ಗಮನಿಸುತ್ತಿದ್ದ ಗುರುಗಳು "ನಾಳೆಯಾದ್ರೂ ಓದಿಕೊಂಡು ಬಾ ಭೀಮಸೇನ್ರಾವ್" ಎಂದು ಆತ್ಮೀಯತೆಯಿಂದಲೇ ಹೇಳುತ್ತ ಕೈಗೆ ಪೆಪ್ಪರ್‌ಮೆಂಟ್ ಕೊಡುತ್ತಿದ್ದರು.

ಹೈಸ್ಕೂಲು ಮುಖ್ಯೋಧ್ಯಾಪಕರಾಗಿದ್ದ ಕುಲಶೇಖರಂ ಪಿಳ್ಳೆ ತುಂಬ ಒಳ್ಳೆಯವರು. ಮಕ್ಕಳನ್ನು ದಂಡಿಸದೆ, ಅವರ ಮನಸ್ಸನ್ನು ನೋಯಿಸದೆ ಮಮತೆಯಿಂದ ಮಾತಾಡಿಸಿ ವಿದ್ಯಾರ್ಥಿಗಳ ಮನವೊಲಿಸುತ್ತಿದ್ದರು. ಇಂಥ ಸಹೃದಯ ಗುರುಗಳ ಸಹವಾಸದಲ್ಲಿ ಪಳಗಿದ ಬೀಚಿಯುವರಲ್ಲಿ ಕ್ರಮೇಣ ತುಂಟತನ ಕಡಿಮೆಯಾಯಿತು.

ಎಸ್. ಎಸ್. ಎಲ್. ಸಿ.ಗೆ ಎರಡು ವರ್ಷಗಳಿದ್ದಾಗ ಬೀಚಿ ಕನ್ನಡವನ್ನು ಐಚ್ಛಿಕ ವಿಷಯುವನ್ನಾಗಿ ಆಯ್ಕೆ ಮಾಡಿಕೊಂಡರು. ಗಳಗನಾಥರು ಬರೆದ 'ಈಶ್ವರೀ ಸೂತ್ರ' ಮತ್ತು ಎಂ. ಎಸ್. ಪುಟ್ಟಣ್ಣನವರು ಬರೆದ 'ಮಾಡಿದ್ದುಣ್ಣೋ ಮಹರಾಯ' ಎಂಬ ಎರಡು ಕಾದಂಬರಿಗಳು ಇವರಿಗೆ ಪಠ್ಯಪುಸ್ತಕಗಳಾಗಿದ್ದುವು. 1930ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾದ ಬಳಿಕ ಕನ್ನಡದ ಓದು ಅಲ್ಲಿಗೇ ನಿಂತಿತು.

ಮೊದಲಿನಿಂದಲೂ ಇಂಗ್ಲಿಷ್ ಪಠ್ಯವನ್ನು ಮನಮುಟ್ಟಿ ಓದಿದ್ದರಿಂದ ಇವರಲ್ಲಿ ಇಂಗ್ಲಿಷ್ ಸಾಹಿತ್ಯ ಓದುವ ಅಭಿರುಚಿ ಬೆಳೆಯಿತು. ಶಾಲೆಯಲ್ಲಿದ್ದಾಗಲೇ ಅವರಿವರಿಂದ ಟಾಲ್‌ಸ್ಟಾಯ್, ಡಾಸ್ಟೋವಸ್ಕಿ, ಐನ್‌ಸ್ಟೈನ್, ಹಕ್ಸಲೀ, ಬರ್ಟಂಡ್ ರಸೆಲ್ ಅವರು ಬರೆದ ಉತ್ತಮ ಗ್ರಂಥಗಳನ್ನು ಪಡೆದು ಓದಿ ಮುಗಿಸಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂದೆ ಓದಬೇಕೆಂಬ ಮನಸ್ಸಿತ್ತು. ಆದರೆ ಹಣ ಕೊಡುವವರು ಯಾರು? ಅಣ್ಣ ಹಯವದನರಾಯ ಕಲಬುರ್ಗಿಯಲ್ಲಿ ಓದುತ್ತಿದ್ದ. ಬೀಚಿಗೆ ಹೈಸ್ಕೂಲಿನಲ್ಲಿದ್ದಾಗ ಅರ್ಧ ಫೀ ಮಾಫಿಯಾಗಿತ್ತು. ಇನ್ನರ್ಧ ಫೀ ಬಡವಿದ್ಯಾರ್ಥಿಗಳ ನಿಧಿಯಿಂದ ಸಿಗುತ್ತಿತ್ತು. ಆದರೆ ಕಾಲೇಜು ಶಿಕ್ಷಣದ ವ್ಯವಸ್ಥೆ ಹರಪನಹಳ್ಳಿಯಲ್ಲೂ, ಬಳ್ಳಾರಿಯಲ್ಲಿಯೂ ಇರಲಿಲ್ಲ. ಕಾಲೇಜು ಓದುವುದಾದರೆ ಆಗ ಅನಂತಪುರಕ್ಕೆ ಹೋಗಬೇಕಾಗುತ್ತಿತ್ತು. ಮುಂದಿನ ಓದಿಗೆ ಊಟ–ವಸತಿ ಹಾಗೂ ಬಟ್ಟೆಗಳ, ವ್ಯವಸ್ಥೆ ಮಾಡುವವರಾರು? ಬೀಚಿ ಓದುವುದನ್ನು ಬಿಟ್ಟು ನೌಕರಿ ಹುಡುಕುತ್ತ ಹೊರಟರು.

ಕೆಲಸದ ಬೇಟೆ

ಅನ್ಯರ ಮನೆಯಲ್ಲಿ ಎಷ್ಟು ದಿನ ಇರುವುದು? ಜೀವನೋಪಾಯಕ್ಕಾಗಿ ಒಂದು ಕೆಲಸಬೇಕಾಗಿತ್ತು. ತಂದೆಯ ಸ್ನೇಹಿತರೊಬ್ಬರು ಬಳ್ಳಾರಿಯ ಸಮೀಪ ಒಂದು ತಾಲ್ಲೂಕಿನ ಮ್ಯಾಜಿಸ್ಟ್ರೇಟ್‌ರಾಗಿದ್ದರು. ಚಿಕ್ಕಪ್ಪನಿಂದ ಒಂದು ಪರಿಚಯ ಪತ್ರ ಪಡೆದು ಬೀಚಿ ಮ್ಯಾಜಿಸ್ಟ್ರೇಟರಲ್ಲಿ ಕೆಲಸ ಕೇಳಲು ಹೋದರು.

ಕೈಯಲ್ಲೊಂದು ಚೀಲ ಹಿಡಿದು ಮ್ಯಾಜಿಸ್ಟ್ರೇಟರ ಮುಂದೆ ನಿಂತ ಬೀಚಿಯನ್ನು ನೋಡುತ್ತ ಮಧ್ಯೆ ಮಧ್ಯೆ ಪರಿಚಯ ಪತ್ರವನ್ನು ನೋಡಿದರು.

"ಎಸ್.ಎಸ್.ಎಲ್.ಸಿ. ಪಾಸುಮಾಡಿದೇನೋ" ಮ್ಯಾಜಿಸ್ಟ್ರೇಟರು ಮೂಗಿಗೆ ನಶ್ಯ ಏರಿಸುತ್ತ ಕೇಳಿದರು. 'ಹೂಂ' ಎಂದು ತಲೆಯಾಡಿಸಿದರು ಬೀಚಿ. ಕೈಯಲ್ಲಿದ್ದ ಚೀಲವನ್ನು ನೋಡುತ್ತ ಮ್ಯಾಜಿಸ್ಟ್ರೇಟರು 'ಎಲ್ಲಿ ಇಳಕೊಂಡೀದ್ಯೋ ?' ಎಂದು ಕೇಳಿದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

'ಎಲ್ಲೂ ಇಲ್ಲ' ಎಂದು ಕೈಯಲ್ಲಿದ್ದ ಕೈಚೀಲ ಕೊಂಚ ಮೇಲೆತ್ತುತ್ತ ಹೇಳಿದರು. 'ಸರಿ ಒಳಗೆ ಹೋಗು' ಎಂದು ಅಪ್ಪಣೆ ಕೊಡಿಸಿದರು. ಬೀಚಿ ಮನೆಯೊಳಗೆ ನಡೆದರು. ಅವರ ಮನೆಯಲ್ಲಿ ವೃದ್ಧಳಾದ ತಾಯಿ, ಕಿರಿಯ ವಯಸ್ಸಿನ ಹೆಂಡತಿ, ಒಂದು ಗಂಡು, ಒಂದು ಹೆಣ್ಣು ಇಬ್ಬರು ಮಕ್ಕಳು ಇದ್ದರು. ಬೀಚಿ ಬಲುಬೇಗ ಆ ಮನೆಯಲ್ಲಿ ಹೊಂದಿಕೊಂಡರು. ಒಂದೆರಡು ದಿನ ಕಳೆದ ಬಳಿಕ ಮ್ಯಾಜಿಸ್ಟ್ರೇಟರು ಹೇಳಿದರು, "ನಾಳೆಯಿಂದ ಆಫೀಸಿಗೆ ಬಾರೋ" ಎಂದು.

ಮರುದಿನ ಬೀಚಿ ಆಫೀಸಿಗೆ ಹೋದರು. ಅಟೆಂಡರ್ ವಾಸಪ್ಪ ಮೂರು ತಿಂಗಳ ರಜೆಯ ಮೇಲೆ ಹೋದ. ಆತನ ಸ್ಥಳದಲ್ಲಿ ಬೀಚಿಯನ್ನು ಕೆಲಸ ಮಾಡಲು ಹೇಳಿದರು. ಸಂಬಳ ಇಪ್ಪತ್ತೈದು ರೂಪಾಯಿ. ಆಫೀಸಿನಲ್ಲಿ ಕೆಲಸವೇನೂ ಇಲ್ಲ. ಮ್ಯಾಜಿಸ್ಟ್ರೇಟರ ಮಕ್ಕಳಿಗೆ ಮನೆಯಲ್ಲಿ ಪಾಠ ಹೇಳಿಕೊಡುವುದು. ರಾತ್ರಿ ಮ್ಯಾಜಿಸ್ಟ್ರೇಟರು ಹೇಳುತ್ತಿದ್ದ ತೀರ್ಪುಗಳನ್ನು ಬರೆದುಕೊಳ್ಳುವುದು ಇದಿಷ್ಟೇ ಕೆಲಸ.

ಮೊದಲ ತಿಂಗಳ ಸಂಬಳ ಕೈಗೆ ಬಂದ ಕೂಡಲೇ ಅಟೆಂಡರ್ ವಾಸಪ್ಪನ ರೂಮಿನಲ್ಲಿ ಇರುವ ಏರ್ಪಾಟು ಮಾಡಿಕೊಂಡರು. ವಾಸಪ್ಪ ಒಬ್ಬನೇ ಇದ್ದ. ಬೀಚಿ ವಾಸಪ್ಪನ ಜೊತೆ ಸೇರಿಕೊಂಡು ಇರಲು ಕಾರಣ ತಾನು ಸಂಪಾದಿಸಿದ ಹಣ ಕೈಗೆ ಬರುತ್ತಿರುವಾಗ ಅನ್ಯರ ಹಂಗಿನರಮನೆಯಲ್ಲಿ ಯಾಕಿರಬೇಕು ಎಂಬ ಭಾವನೆಯಿಂದ. ಆದರೂ ನಿತ್ಯದ ರೂಢಿಯಂತೆ ಮ್ಯಾಜಿಸ್ಟ್ರೇಟರ ಮಕ್ಕಳಿಗೆ ಪಾಠ ಹೇಳಿಕೊಡುವುದು, ತೀರ್ಪುಗಳನ್ನು ಬರೆದುಕೊಳ್ಳುವ ಕೆಲಸ ನಿಲ್ಲಿಸಲಿಲ್ಲ.

ವಾಸಪ್ಪನ ರಜೆ ಮುಗಿದು ಕೆಲಸಕ್ಕೆ ಹಾಜರಾದ ಬಳಿಕ ಮತ್ತೊಬ್ಬ ಗುಮಾಸ್ತ ರಜೆಯ ಮೇಲೆ ಹೋದ. ಆಗ ಬೀಚಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುಮಾಸ್ತನ ಕೆಲಸ ಮಾಡಬೇಕಾಯಿತು. ಸಂಬಳ ಒಟ್ಟಿಗೆ ಐವತ್ತು ರೂಪಾಯಿಯಷ್ಟು ಬರುತ್ತಿತ್ತು.

ಒಂದು ರಾತ್ರಿ ಜಜ್‌ಮೆಂಟ್ ಬರೆದು ಮುಗಿದಮೇಲೆ ಮ್ಯಾಜಿಸ್ಟ್ರೇಟರು ಕೇಳಿದರು "ಏನಪಾ ಭೀಮಸೇನಾ ! ನಮ್ಮ ಮಗಳ್ನ ಮದವಿ ಮಾಡಕೋತಿಯೇನು ?" ಬೀಚಿ ಕಕ್ಕಾಬಿಕ್ಕಿಯಾದ. ಮದುವೆಯಾಗಬೇಕೆಂಬ ಆಲೋಚನೆಯಿರಲಿಲ್ಲ. "ನಾಳೆ ಹೇಳ್ತೀನಿ ಸಾರ್" ಎಂದು ಅಂದು ಜಾರಿಕೊಂಡ ಬೀಚಿ ರಾತ್ರಿಯಿಡೀ ಮಲಗಲಿಲ್ಲ. ನೌಕರಿಯ ಆಸೆಯಿಂದ ಮಾವನ ಗುಲಾಮನಾಗಿರಲು ಬೀಚಿಯ ಮನಸ್ಸು ಒಪ್ಪಲಿಲ್ಲ. ಮರುದಿನ ಮ್ಯಾಜಿಸ್ಟ್ರೇಟರಿಗೆ ಹೇಳಿದರು"ನಾನು ಮದುವೆ ಮಾಡ್ಕೊಂಬೋದಿಲ್ಲ ಸಾರ್" ಎಂದು. 'ಹೋಗು–ನಡಿ' ಎಂದರು ಮ್ಯಾಜಿಸ್ಟ್ರೇಟರು ಬೇಸರದಿಂದ. ಆ ಗುಮಾಸ್ತ ಮರಳಿ ಕೆಲಸಕ್ಕೆ ಬಂದ ಕೂಡಲೇ ಬೀಚಿಯ ಕೆಲಸ ಹೋಯಿತು. ಆದರೆ ಬೀಚಿ ಉಪಕಾರದ ಉರುಲಿನಿಂದ ಪಾರಾಗಿ ಮತ್ತೆ ಕೆಲಸದ ಬೇಟೆಗೆ ತೊಡಗಿದ. ಇದು ಹತ್ತೊಂಬತ್ತು ನೂರ ಮೂವತ್ತೊಂದರ ಮಾತು. ಹಯವದನರಾಯರು ಆಗ ಬಳ್ಳಾರಿಯ ಒಂದು ಖಾಸಗಿ ಕಂಪನಿಯಲ್ಲಿದ್ದರು. ಬೀಚಿ ಅಣ್ಣನ ಮನೆಯಲ್ಲಿ ಉಂಡುಟ್ಟು ಉಂಡಾಡಿಯಾಗಿ ಬೆಳೆಯತೊಡಗಿದ್ದ. ತಮ್ಮನನ್ನು ಮೆಡಿಕಲ್ ಕಾಲೇಜಿಗಾದರೂ ಕಳಿಸಿ ಡಾಕ್ಟರ್ ಮಾಡಬೇಕೆಂಬುದು ಅಣ್ಣನ ಹಂಬಲ. ಆಗ ಕೆಲವು ತಿಂಗಳು ಬೀಚಿ ಹತ್ತಿ ತೂಗುವ ಮಂಡಿಯಲ್ಲಿ ಗುಮಾಸ್ತರಾಗಿ ದುಡಿಯುತ್ತಿದ್ದರು. ಹಯವದನರಾಯರ ಮನಸ್ಸು ತಮ್ಮನನ್ನು ಮುಂದಕ್ಕೆ ಓದಿಸಬೇಕೆಂದು ತುಡಿಯುತ್ತಿತ್ತು. ಹಯವದನರಾಯ – ಬೀಚಿ ಒಡಹುಟ್ಟಿದವರಾದರೂ ಆತ್ಮೀಯ ಸ್ನೇಹಿತರಂತೆ ವರ್ತಿಸುತ್ತಿದ್ದರು.

ಸಹಕಾರಿ ತರಬೇತಿಯನ್ನು ಮುಗಿಸಿದರೆ ಕೆಲಸ ಬಹುಬೇಗ ಸಿಗುತ್ತದೆಂದು ಯಾರೋ ಹಯವದನರಾಯರಿಗೆ ಹೇಳಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಅನಂತಪುರದಲ್ಲಿ ಟ್ರೈನಿಂಗ್ ಕಾಲೇಜ್ ಇತ್ತು. ಹಯವದನ ರಾಯರು, ಒಂದು ವರ್ಷದ ತರಬೇತಿಗೆ ಊಟ–ವಸತಿ–ವಸ್ತ್ರಗಳಿಗೆ ಬೇಕಾದಷ್ಟು ಹಣವನ್ನು ಮುಂಗಡವಾಗಿ ಬ್ಯಾಂಕಿನಲ್ಲಿಟ್ಟು ಬೀಚಿ ಯವರನ್ನು ಅನಂತಪುರಕ್ಕೆ ಕಳುಹಿಸಿದರು.

ಇತ್ತ ಹಯವದನರಾಯರಿಗೆ 'ಸ್ಪ್ರಾಸ್ ಅಂಡ್ ಕೋ' ಎಂಬ ಜರ್ಮನ್ ಕಂಪನಿಯಲ್ಲಿ ಗದಗಿನಲ್ಲಿ ಕೆಲಸ ಸಿಕ್ಕಿತು. ತರಬೇತಿ ಮುಗಿಸಿ ಬರುವಷ್ಟರಲ್ಲಿ ಅದೇ ಕಂಪನಿಯಲ್ಲಿ ಬೀಚಿಯವರಿಗೂ ಗುಮಾಸ್ತೆಯ ಕೆಲಸ ಸಿಕ್ಕಿತು. ದಾಸರ ಓಣಿಯಲ್ಲಿರುವ ಪುಟ್ಟ ಮನೆಯಲ್ಲಿ ಅಣ್ಣ ಅತ್ತಿಗೆಯವರೊಂದಿಗೆ ಬೀಚಿ ಸುಖ ಸಂಭ್ರಮ ದಲ್ಲಿದ್ದರು.

1933ರಲ್ಲಿ ಜ ಮ ಖಂ ಡಿ ಯ ಶ್ರೀನಿವಾಸಾಚಾರ್ಯರ ಮಗಳು ಸೀತಾಬಾಯಿಯವರೊಂದಿಗೆ ಇವರ ವಿವಾಹ ನಡೆಯಿತು. ಅಣ್ಣನ ಮನೆಯ ಸಮೀಪವೇ ಒಂದು ಬಾಡಿಗೆಯ ಮನೆಯನ್ನು ಹಿಡಿದು ಗಂಡ – ಹೆಂಡತಿ ವಾಸ ಮಾಡತೊಡಗಿದರು. ಗದಗಿ ನಲ್ಲಿದ್ದಾಗಲೂ ಬೀಚಿ ಒಳ್ಳೆಯ ಕೆಲಸದ ಅನ್ವೇಷಣೆಯಲ್ಲಿದ್ದರು. ಹುಬ್ಬಳ್ಳಿಯ ಲೈಫ್ ಇನ್‌ಶೂರೆನ್ಸ್ ಕಂಪನಿಯ ಏಜೆಂಟರ ಆಫೀಸಿನಲ್ಲಿ ಕೆಲಸ ಸಿಕ್ಕಿತು. ಒಳ್ಳೆಯ ಸಂಬಳ–ಗೌರವದ ಕೆಲಸ. ಆಫೀಸಿನಲ್ಲಿ ಬೀಚಿಯವರೇ ಹಿರಿಯ ಅಧಿಕಾರಿ. ಇವರ ಕೈಕೆಳಗೆ ಒಬ್ಬ ಗುಮಾಸ್ತ. ಕಾರ್ಯನಿಮಿತ್ತ ಬೀಚಿ ಹುಬ್ಬಳ್ಳಿಯಲ್ಲಿ ಓಡಾಡಬೇಕಾಗುತ್ತಿತ್ತು.

ಇನ್‌ಶೂರೆನ್ಸ್ ಕಂಪನಿಯ ಕೆಲಸವೂ ಇವರಿಗೆ ಖುಷಿ ಕೊಡ ಲಿಲ್ಲ. ಮತ್ತೆ ಕೆಲಸ ಹುಡುಕಲಾರಂಭಿಸಿದರು. 1936ರಲ್ಲಿ ಬಳ್ಳಾ ರಿಯ ಪೊಲೀಸ್ ಸೂಪರಿನ್‌ಟೆಂಡೆಂಟ್ ಆಫೀಸಿನಲ್ಲಿ ಅಟೆಂಡರ್ ಕೆಲಸ ಬೀಚಿಗೆ ಸಿಕ್ಕಿತು. ಬೀಚಿಯ ಸಂಸಾರ ಹುಬ್ಬಳ್ಳಿಯಿಂದ ಬಳ್ಳಾರಿಗೆ ಬಂತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬೀಚಿಗೆ ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವವಿತ್ತು. ಆಫೀಸಿನ ಕೆಲಸದಲ್ಲಿ ದಕ್ಷತೆ, ನಿಷ್ಠೆಯಿತ್ತು. ತನಗೆ ನಿರ್ವಹಿಸಿದ ಕೆಲಸವನ್ನು ಅತ್ಯಂತ ಪ್ರಾಮಾಣಿಕತೆಯಿಂದ ನೀಟಾಗಿ ಮಾಡುತ್ತಿದ್ದರು. ತನ್ನ ಆಫೀಸಿನ ಎಲ್ಲ ಕೆಲಸಗಾರರೊಂದಿಗೆ ನಗುತ್ತ-ನಗಿಸುತ್ತ-ನಲಿಯುತ್ತ ದಿನ ಕಳೆಯುತ್ತಿದ್ದರು. ಊಟ-ಉಡುಗೆ ಕೆಲಸದಲ್ಲಿ ಶಿಸ್ತಿನ ಸಿಪಾಯಿಯಂತಿದ್ದ ಬೀಚಿ ಸ್ಪಷ್ಟವುತವಾದಿಯಾಗಿದ್ದರು. ಪೊಲೀಸ್ ಖಾತೆಯಲ್ಲಿ ಸಾಂಕ್ರಾಮಿಕ ರೋಗದಂತೆ ಹರಡುತ್ತಿದ್ದ ಲಂಚ ರುಷುವತ್ತುಗಳನ್ನು ನೋಡಿ ಬೀಚಿ ಕೆಂಡ ಕಾರುತ್ತಿದ್ದರು. "ನಾವು ಮಾಡುವ ಕೆಲಸಕ್ಕೆ ನಮಗೆ ಸರಕಾರ ಸಂಬಳ ಕೊಡುತ್ತಿದೆ. ಸಾರ್ವಜನಿಕರ ಹಿತರಕ್ಷಣೆ ಮಾಡುವುದಕ್ಕಾಗಿಯೇ ನಾವು ಸಂಬಳ ಪಡೆಯುತ್ತೇವೆ. ಹೀಗಿದ್ದಾಗ ಜನರಿಂದ ಲಂಚದ ರೂಪದಲ್ಲಿ ಹಣ ಏಕೆ ಪಡೆಯಬೇಕು ?" ಎಂದು ಕೇಳುತ್ತಿದ್ದರು. ತಾವು ಲಂಚ ತೆಗೆದುಕೊಳ್ಳುತ್ತಿರಲಿಲ್ಲ. ಮಿಕ್ಕವರು ತೆಗೆದುಕೊಂಡರೂ ಸುಮ್ಮನಿರುತ್ತಿರಲಿಲ್ಲ. ಆದರೆ ಎಲ್ಲರೂ ಲಂಚಕ್ಕೆ ಕೈಯೊಡ್ಡಿ ನಿಂತಾಗ ಒಬ್ಬನ ಕೂಗು ಯಾರಿಗೆ ಕೇಳಿಸಬಲ್ಲುದು ?

ಮನುಷ್ಯನಲ್ಲಿ ಪ್ರಾಮಾಣಿಕತೆಯಿರಬೇಕು. ಆದರೆ ಪ್ರಾಮಾಣಿಕತೆಯು ಬುದ್ಧಿವಂತಿಕೆಯ ಪ್ರದರ್ಶನಕ್ಕಿಳಿದರೆ ಅದು ಮೂರ್ಖತನವಾಗುತ್ತದೆ. ತಾನು ಪ್ರಾಮಾಣಿಕ, ದಕ್ಷ, ಲಂಚ ವಿರೋಧಿಯೆಂಬ ಅಹಂಭಾವ ಬೀಚಿಯವರಲ್ಲಿ ಮೊಳೆಯಿತು. ಅನ್ಯರ ಹುಳುಕುಗಳನ್ನು ಬಯಲಿಗೆಳೆದರೆ ತಾನು ದೊಡ್ಡ ಮನುಷ್ಯನಾಗುತ್ತೇನೆ ಎಂಬ ಭಾವನೆ ಬಲಿಯಿತು. ಅವರಿವರು ಪಡೆದ ಲಂಚ, ಮಾಡಿದ ಮೋಸ, ನಯವಂಚಕತೆ, ಅವ್ಯವಹಾರಗಳನ್ನು ಹಿರಿಯರು ಕಿರಿಯರು ಎಂಬ ಭೇದ ಭಾವವಿಲ್ಲದೆ ವ್ಯಂಗ್ಯ ನುಡಿಯಿಂದ ಟೀಕಿಸಲಾರಂಭಿಸಿದರು. ಕೊಂಚ ಖಾರವಾಗಿ-ಕಟುವಾಗಿ ಟೀಕಿಸಿದರೆ ಅವರು

Sri Vidyabharathi Book Centre, Sringeri

 CC-O. In Public Domain. Digitized by eGangotri

ಸುಧಾರಿಸಬಹುದು ಎಂದು ಭಾವಿಸಿದ ಬೀಚಿಗೆ ಶತ್ರುಗಳು ಹುಟ್ಟಿಕೊಂಡರು. ಕೆಲವರು ಬೀಚಿಯ ಬಾಯಿಗೆ ಬೀಳಲಾರದೆ ತಲೆ ತಪ್ಪಿಸಿಕೊಂಡು ಮೇಲಧಿಕಾರಿಗಳ ಕಿವಿಯೂದತೊಡಗಿದರು. ಕೆಲವರು ನೇರವಾಗಿ ಜಗಳಕ್ಕಿಳಿದರು. ಕೆಲವರು ಇವರ ಸಹವಾಸ ಬೇಡ ಎಂದು ದೂರವಾದರು. ಅನೇಕರು ಇವರೊಂದಿಗೆ ಸಹಕರಿಸಿ ದುಡಿಯಲು ನಿರಾಕರಿಸಿದರು. ಆಗ ಇವರ ಆಫೀಸಿನಲ್ಲಿ ಸುಮಾರು ಮೂವತ್ತು ಗುಮಾಸ್ತರಿದ್ದರು. ಹಿರಿಯರ ಬಗೆಗೆ ಗೌರವ, ಸಹೋದ್ಯೋಗಿಗಳೊಂದಿಗೆ ಸೌಜನ್ಯ,ಕಿರಿಯರ ಬಗ್ಗೆ ಸಹಾನುಭೂತಿ ಯಿಲ್ಲದ ಬೀಚಿ ಯಾರಿಗೂ ಬೇಡವಾದರು. ಬೀಚಿಗೆ ಮೇಲಧಿಕಾರಿ ಗಳು ಕಿರುಕುಳ ಕೊಡಲಾರಂಭಿಸಿದರು.

ಅರ್ಧತೋಳಿನ ಅಂಗಿಯನ್ನು ಒಳಸೇರಿಸಿ ಧರಿಸುವ ದೊಗಲೆ ಪ್ಯಾಂಟ್, ಕುತ್ತಿಗೆಗೆ ಟೈ, ತಲೆಗೊಂದು ಹ್ಯಾಟ್, ಬಾಯಲ್ಲಿ ಸಿಗ ರೇಟು ಕಚ್ಚಿ ಹೊರಟರೆ ಅಪ್ಪಟ ಪಾಶ್ಚಾತ್ಯರಂತೆ ಕಾಣುವ ಬೀಚಿ ಒಂದು ದಿನ ಅಗ್ಗದ ಪೈಪ್ ಖರೀದಿಸಿ ಅದರಲ್ಲಿ ತಂಬಾಕು ತುಂಬಿ, ಕಡ್ಡಿ ಗೀರಿ ಹೊಗೆಯುಗುಳುತ್ತ ಗಂಭೀರವಾದ ರಾಜಠೀವಿ ಯಲ್ಲಿ ನಿಂತಿದ್ದರು.

ಗಂಪಾ ಸತ್ಯನಾರಾಯಣ ಪಂತಲು ಎಂಬವರು ಇವರ ಮೇಲಿನ ಅಧಿಕಾರಿಗಳು. ತಮ್ಮ ಸೌಜನ್ಯ, ಸಹನಶೀಲತೆಯಿಂದ ಒಳ್ಳೆಯ ಅಧಿಕಾರಿಗಳೆಂದು ಹೆಸರಾಗಿದ್ದರು. ಬೀಚಿಯವರ ಕೆಲಸ, ದಕ್ಷತೆಯನ್ನು ಮೆಚ್ಚಿಕೊಂಡಿದ್ದ ಸತ್ಯನಾರಾಯಣ ಪಂತಲು ಅಲ್ಲಿಗೆ ಬಂದರು. ಬೀಚಿ ಪೈಪ್ ಸೇದುತ್ತ ಉಗಿ ಬಂಡಿಯಂತೆ ಹೊಗೆ ಯುಗುಳುತ್ತ ನಿಂತಿದ್ದರು. ಬೀಚಿಯವರ ಬಾಯಿಯಿಂದ ಪೈಪ್ ಕಿತ್ತು ಒಂದು ಕಲ್ಲಿನ ಮೇಲಿಟ್ಟು ಮತ್ತೊಂದು ಕಲ್ಲಿನಿಂದ ಜಜ್ಜಿ ದರು. "ನಿನ್ನನ್ನು ನೋಡಿ ಉರಿಯುವ ಜನ ಪೈಪ್ ನೋಡಿ ಮತ್ತಷ್ಟು ಕೆಂಡಕಾರುತ್ತಾರೆ. ಹೋಗು" ಎಂದು ಬುದ್ಧಿವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇಳಿ ಒಳಗೆ ಕಳಿಸಿದರು. ತನ್ನ ಹಿತೈಷಿಯಾದ ಸತ್ಯನಾರಾಯಣ ಪಂತುಲು ಅವರನ್ನು ಗೌರವದಿಂದ ಕಾಣುತ್ತಿದ್ದ ಬೀಚಿ ಅವರ ಮಾತಿಗೆ ತಲೆ ಬಾಗಿದರು. ಕೆಲವು ತಿಂಗಳುಗಳ ನಂತರ ಸತ್ಯ ನಾರಾಯಣ ಪಂತುಲು ಅವರು ವರ್ಗವಾಗಿ ಬೇರೊಂದು ಊರಿಗೆ ಹೋದರು.

ಅದುವರೆಗೆ ಜ್ವಾಲಾಮುಖಿಯಂತೆ ಒಳಗೊಳಗೆ ಕುದಿಯು ತ್ತಿದ್ದ ಮ್ಯಾನೇಜರ್ ಆಗ ಸಣ್ಣಪುಟ್ಟ ಘಟನೆಗಳಿಗೂ ಸಿಡಿಮಿಡಿ ಗೊಳ್ಳತೊಡಗಿದರು. ಒಂದು ದಿನವಂತೂ ಇವರಿಬ್ಬರಲ್ಲಿ ದೊಡ್ಡ ವಾಗ್ಯುದ್ಧವೇ ನಡೆಯಿತು. ದೂರು ಮೇಲಧಿಕಾರಿಯ ಬಳಿ ಹೋಯಿತು. ಫರಂಗಿ ಅಧಿಕಾರಿ ವಿಚಾರಣೆಗೆ ಬಂದರು. ಮ್ಯಾನೇ ಜರು ಕೊಟ್ಟ ದೂರಿನಲ್ಲಿ ಹುರುಳಿಲ್ಲವೆಂದು ತಿಳಿದು ಒಳಗೆ ನಡೆ ದರು. ಈ ಘಟನೆಯಿಂದ ಮ್ಯಾನೇಜರಿಗೆ ಅವಮಾನವಾಯಿತು. ಬೀಚಿಯವರಿಗೆ ಜಯವಾಯಿತು.

ಬೀಚಿಯ ಗೆಲುವು ಅವರ ತಲೆಗೇರಿತು. ಮ್ಯಾನೇಜರ್‌ರನ್ನು ನೇರವಾಗಿ–ಎಲ್ಲರೆದುರೇ ಟೀಕಿಸಲಾರಂಭಿಸಿದರು. ಇವರಿಬ್ಬರಲ್ಲಿ ದಿನವೂ ಒಂದಲ್ಲ ಒಂದು ದುಸುಮುಸು ನಡೆಯುತ್ತಿತ್ತು. ಇಬ್ಬ ರಿಗೂ ತಲೆ ಬಿಸಿ. ಇಬ್ಬರದೂ ಪ್ರತಿಷ್ಠೆಯ ಪ್ರಶ್ನೆ. ಯಾರೂ ಸೋಲಲು ಸಿದ್ಧರಿಲ್ಲ. ಇದರಿಂದ ಇಬ್ಬರಿಗೂ ಮನಶ್ಶಾಂತಿಯಿಲ್ಲ. ಬೀಚಿಯವರ ಪಕ್ಷದಲ್ಲಿ ಯಾರೂ ಇಲ್ಲ. ಒಬ್ಬಂಟಿಗನಾಗಿ ಎಲ್ಲ ರನ್ನು ಹೇಗೆ ಎದುರಿಸುವುದು ?

ಒಂದು ದಿನ ಅದೇ ಮ್ಯಾನೇಜರು ಬೀಚಿಯವರನ್ನು ತಮ್ಮ ಬಳಿ ಕರೆದು ಪ್ರತಿ ತಿಂಗಳ ಸಂಬಳದಲ್ಲಿ ಎರಡು ರೂಪಾಯಿಗಳನ್ನು ಭವಿಷ್ಯ ನಿಧಿ (Provident Fund) ಯಲ್ಲಿ ತೊಡಗಿಸಲು ಹೇಳಿ ದರು. ಮ್ಯಾನೇಜರರು ಏನು ಹೇಳಿದರೂ ಸಂದೇಹದ ಕಣ್ಣಿನಿಂದ ನೋಡುವ ಬೀಚಿ 'ಸಾಧ್ಯವಿಲ್ಲ' ಎಂದು ಒಂದು ಗಂಟೆ ಜಗಳಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಕುರ್ಚಿಯಲ್ಲಿ ಬಂದು ಕುಳಿತರು. ಕಡ್ಡಾಯವಾಗಿ ಉಳಿತಾಯ ಮಾಡಿದ ಹಣ ಹನಿ ಹನಿಯಾಗಿ ಹಳ್ಳವಾಗುತ್ತದೆಯೆಂದು ಅವರಿಗೇನು ಗೊತ್ತು? 'ಸಾಧ್ಯವಿಲ್ಲ' ಎಂದು ಹೇಳಿದ್ದರೂ ಕೊನೆಗೆ ಮ್ಯಾನೇಜರರ ಮಾತಿಗೆ ಬಲವಂತದಿಂದ ಒಪ್ಪಿದರು. ಮುಂದೆ ನಿವೃತ್ತರಾಗುವ ಕೆಲವು ವರ್ಷಗಳ ಮುನ್ನ ಇದೇ ಭವಿಷ್ಯ ನಿಧಿಯಲ್ಲಿ ಉಳಿಸಿದ ಹಣದಿಂದಲೇ 'ತಿಂಮನ ಮನೆ' ಎಂಬ ಮನೆ ಬೆಂಗಳೂರಿನಲ್ಲಿ ಕಟ್ಟಿಕೊಂಡು ಉಳಿದರು. ಅಂದು ಆ ಮ್ಯಾನೇಜರರ ಒತ್ತಾಯದಿಂದ ಮಾಡಿಸಿದ ಉಳಿತಾಯವೇ ಅವರ ಭವಿಷ್ಯದ ಆಸರೆಯಾಯಿತು.

ಬಳ್ಳಾರಿಯ ಕಹಿ ವಾತಾವರಣದಿಂದ ಬಿಡುಗಡೆ ಹೊಂದಲು ಬೀಚಿ ಮದರಾಸಿಗೆ ವರ್ಗಾವಣೆ ಮಾಡಿಸಿಕೊಂಡು ಹೋದರು. ಅಲ್ಲಿ ಸಿ.ಐ.ಡಿ. ಇಲಾಖೆಯಲ್ಲಿ ಕೆಲಸ. ಕಳ್ಳ-ಕಾಕರ ಬೆರಳಿನ ಮುದ್ರೆಗಳನ್ನು ಪರೀಕ್ಷೆ ಮಾಡುವ ಕೆಲಸ. ಅಲ್ಲಿ ಪ್ರಖರವಾದ ವಿದ್ಯುದ್ದೀಪಗಳ ಮುಂದೆ ಕೆಲಸ ಮಾಡಬೇಕಾದುದರಿಂದ ಬೀಚಿಯವರ ಕಣ್ಣುಗಳು ಆ ಪ್ರಕಾಶವನ್ನು ತಡೆಯದಾದವು. ಒಂದು ವರ್ಷದ ನಂತರ ಅವರು ಮರಳಿ ಬಳ್ಳಾರಿಗೆ ಬಂದರು. ಹಿಂದೆ ಬಳ್ಳಾರಿಯ ಆಫೀಸಿನಲ್ಲಿ ಮ್ಯಾನೇಜರ್‌ರಾಗಿದ್ದ ಅಯ್ಯರರು ಆಗ ಬೇರೆ ಊರಿಗೆ ವರ್ಗವಾಗಿ ಹೋಗಿದ್ದರು.

ಬೀಚಿ ಬಳ್ಳಾರಿಯ ಆಫೀಸಿನಲ್ಲಿದ್ದಾಗ ಅನೇಕರಿಗೆ ಸಹಾಯ ಮಾಡಿದರು. 1936ರಲ್ಲಿ ನೌಕರಿ ಸೇರಿದ ಎರಡು ವರ್ಷಗಳಲ್ಲಿ ದ್ವಿತೀಯ ದರ್ಜೆಯ ಗುಮಾಸ್ತರಾಗಿ ಬಡತಿ ಹೊಂದಿದ್ದರು. ಇದರಿಂದ ತಮ್ಮ ಕೈಕೆಳಗಿನ ಎಷ್ಟೋ ಜನರಿಗೆ ಬೀಚಿ ಕರುಣೆ ತೋರಿದರು. ಎಲ್ಲರೊಂದಿಗೆ ಸರಾಗವಾಗಿ ಬೆರೆಯುತ್ತ ಬಡವರ ಬವಣೆಗಳನ್ನು ನಿವಾರಿಸಿದರು. ಪೊಲೀಸ್ ಖಾತೆಯಲ್ಲಿ ರಜೆ ಇಲ್ಲದ ಗೈರುಹಾಜರಿ ಒಂದು ಅಪರಾಧ. ಇಪ್ಪತ್ತೊಂದು ದಿನಗಳು ಹಾಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೈರು ಹಾಜರಿಯಾದರೆ ಅವನನ್ನು ಕೆಲಸದಿಂದ ವಜಾ ಮಾಡಿ, ಮೂರು ತಿಂಗಳ ನಂತರ ಡಿಸ್‌ಮಿಸ್ ಮಾಡುತ್ತಿದ್ದರು.

ಶೇಷಪ್ಪ, ಪೊಲೀಸ್ ಸಿಪಾಯಿ, ಹೀಗೆ ಗೈರು ಹಾಜರಿಯಾಗಿ ನೌಕರಿ ಕಳಕೊಳ್ಳುವ ಸ್ಥಿತಿಗೆ ಬಂದಿದ್ದ. ವಿಚಾರಣೆ ಮಾಡಿ ವರದಿ ಮಾಡಲು ಬೀಚಿಯ ಹತ್ತಿರ ಸಂಬಂಧಿಸಿದ ಕಾಗದಪತ್ರಗಳು ಬಂದುವು. ಕೆಲವು ದಿನ ಪೆಂಡಿಂಗಿನಲ್ಲಿಡತಕ್ಕದ್ದೆಂದು ಮೇಲಧಿಕಾರಿಗಳಿಂದ ಬರೆಯಿಸಿಕೊಂಡು ಶೇಷಪ್ಪ ಬರುವುದನ್ನೇ ಕಾಯುತ್ತಿದ್ದರು.

ಐದಾರು ದಿನಗಳ ನಂತರ ಶೇಷಪ್ಪ ಬೀಚಿಯವರ ಮನೆಗೆ ಹೋದ. ಶೇಷಪ್ಪನನ್ನು ಕಂಡ ಕೂಡಲೇ ಬೀಚಿ ದರ್ಪದಿಂದ ತರಾಟೆಗೆ ತೆಗೆದುಕೊಂಡು "ಹೋಗು ಡಿಸ್‌ಮಿಸ್ ಮಾಡುತ್ತೇನೆ" ಎಂದು ಜಿಲ್ಲಾ ಸೂಪರಿಂಟೆಂಡೆಂಟರು ಮಾತನಾಡುವ ಧಾಟಿಯಲ್ಲಿ ಗದರಿಸಿದರು.

ಶೇಷಪ್ಪ ಅಂಜುತ್ತ ಹೇಳಿದ: "ನನಗೆ ಕ್ಷಯರೋಗ ದ್ಯಾವ್ರ." ಈ ಮಾತು ಕೇಳಿದ ಬೀಚಿಯು ಸಿಟ್ಟು ಕುಸಿಯಿತು. ಆತನನ್ನು ಕರುಣೆಯಿಂದ ಕೂಡಿಸಿ ಹಾಲು ಕೊಟ್ಟು ಆತನ ಸಂಸಾರದ ಸುಖ ದುಃಖ ಕೇಳಿಕೊಂಡರು. ವೃದ್ಧ ತಾಯಿ, ಹೆಂಡತಿ, ಆರು ಪುಟ್ಟ ಮಕ್ಕಳು, ಶೇಷಪ್ಪನ ಸಂಸಾರದಲ್ಲಿದ್ದಾರೆಂದು ತಿಳಿದಾಗ– ಅದೂ ಯಾವ ಸಂಪಾದನೆಯಿಲ್ಲದೆ ಬದುಕಬೇಕು–ಎಂದಾಗ ಬೀಚಿಯ ಹೃದಯ ಕರಗಿ ನೀರಾಯಿತು. ತಮ್ಮ ಬುದ್ಧಿಯನ್ನೆಲ್ಲ ವೆಚ್ಚಮಾಡಿ ಅವನಿಗೆ ರಜಾ ಮಂಜೂರು ಮಾಡಿಸಿದರು.

ಶೇಷಪ್ಪನ ಸಂಸಾರ ಉಳಿಯಿತು. ಶೇಷಪ್ಪನ ಕಾಯಿಲೆಯೂ ಕಡಮೆಯಾಗಿತ್ತು. ಉಪಕಾರ ಮಾಡಿದ ಬೀಚಿಗೆ ಶೇಷಪ್ಪ ಹಣ ಕೊಡಲು ಬಂದಾಗ ಬೀಚಿ ಆ ಹಣಕ್ಕೆ ತನ್ನ ಜೇಬಿನಲ್ಲಿದ್ದುದನ್ನೂ ಸೇರಿಸಿ ಅವನಿಗೆ ಕೊಟ್ಟರು.

Sri Vidyabharathi Book Centre, Sringeri

CC-O. In Public Domain. Digitized by eGangotri



ಬೀಚಿಯವರ ಕುಟುಂಬ

Sri Vidyabharathi Book Centre, Sringeri

CC-O. In Public Domain. Digitized by eGangotri



ಖ್ಯಾತ ಸಂಶೋಧಕ ಶಂ. ಬಾ. ಜೋಶಿಯವರೊಡನೆ ಬೀಚಿ

Sri Vidyabharathi Book Centre, Sringeri

CC-O. In Public Domain. Digitized by eGangotri



60ವರ್ಷ ತುಂಬಿದ ಬೀಚಿಯವರಿಗೆ ಬೆಂಗಳೂರಿನಲ್ಲಿ ತಿ. ತಾ. ಶರ್ಮರಿಂದ ಸನ್ಮಾನ

Sri Vidyabharathi Book Centre, Sringeri

CC-O. In Public Domain. Digitized by eGangotri



‘ಸತ್ಯಂವದ ಧರ್ಮಂಚರ’ ನಾಟಕದ ಮುಖ್ಯ ಅತಿಥಿಯಾಗಿದ್ದ ಬೀಚಿಯವರಿಗೆ ಅನಿರುದ್ಧ ದೇಸಾಯಿಯವರಿಂದ ಮಾಲಾರ್ಪಣೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅಷ್ಟು ಹಾಸ್ಯಪ್ರಿಯರೂ



ಅಷ್ಟೇ ಗಂಭೀರ ಚಿಂತನಶೀಲರು

Sri Vidyabharathi Book Centre, Sringeri

 CC-O. In Public Domain. Digitized by eGangotri

ಮೂರ್ತಿ ಎಂಬ ಬಡ ವಿದ್ಯಾರ್ಥಿ—ಪಾಲಿಟೆಕ್ನಿಕ್‌ನಲ್ಲಿ ಓದು ತ್ತಿದ್ದ. ವಾರಾನ್ನ ಮಾಡಿ ವ್ಯಾಸಂಗ ಮಾಡುತ್ತಿದ್ದ. ಬೀಚಿಯು ಅಣ್ಣ ಹಯವದನರಾಯರಲ್ಲಿ ವಾರದ ಒಂದು ದಿನ ಊಟಕ್ಕೆ ಬರುತ್ತಿದ್ದ. ಬೀಚಿಯು ಮನೆಯಲ್ಲಿ ವಾರದ ಒಂದು ದಿನ ಊಟ ಮಾಡಿ ಅವರ ಮನೆಯಲ್ಲಿಯೇ ಇರುತ್ತಿದ್ದ. ಅಂಗಡಿಯಿಂದ ಸಾಮಾನು ತಂದುಕೊಡುವ ಕೆಲಸ ಮಾಡುತ್ತಿದ್ದ. ಬೀಚಿಯು ಹೆಂಡತಿಯು ಅಣ್ಣನ ಅಂಗಡಿಯಿಂದ ಸಾಮಾನುಗಳನ್ನು ಉದ್ರಿ ತರಿಸುತ್ತಿದ್ದರು. ತಿಂಗಳು ತುಂಬಿದ ಬಳಿಕ ಹಣ ಕೊಡುತ್ತಿದ್ದರು.

ಒಮ್ಮೆ ಮೂರ್ತಿ ಕೆಲವು ಸಾಮಾನುಗಳು ಅಗತ್ಯಕ್ಕಿಂತಲೂ ಹೆಚ್ಚು ತಂದುದು ತಿಳಿದಾಗ ಬೀಚಿ ಮೂರ್ತಿಯನ್ನು ಕರೆದು "ನಿನ್ನ ಚೀಲದಲ್ಲಿ ನಿನ್ನದಲ್ಲದ ವಸ್ತುಗಳು ಏನೇನು ಇವೆಯೋ ಮೇಜಿನ ಮೇಲಿಡು" ಎಂದು ಆಜ್ಞಾಪಿಸಿದರು. ಆ ಹುಡುಗ ಒಂದೊಂದೇ ಸಾಮಾನು ತೆಗೆದು ಮೇಜಿನ ಮೇಲಿಟ್ಟ. ಅದರಲ್ಲಿ ಅಂಗಡಿಯಿಂದ ತಂದ ಹೆಚ್ಚಿನ ಕೆಲವು ಸಾಮಾನುಗಳು ಮನೆಯಿಂದ ಕದ್ದ ಕೆಲವು ಸಾಮಾನುಗಳೂ ಕಂಡುಬಂದವು. ಬೀಚಿಯು ಕಣ್ಣು ಕೆಂಪಗಾ ದುವು–ನಿಷ್ಠುರವಾಗಿ ಸ್ಪಷ್ಟವಾಗಿ ಹೇಳಿದರು,

"ಇನ್ನು ಈ ಮನೆಯಲ್ಲಿ ಕಾಲಿಡಬೇಡ. ಈ ಮನೆ ವಾರ ದೂಟ ಇನ್ನಿಲ್ಲ. ಏನೂ ಕಷ್ಟವಿಲ್ಲದೆ ಈ ಮನೆ ಸಿಕ್ಕಿತ್ತು. ನಂಬಿ ಕೆಯ ಬೆಲೆ ನಿನಗರ್ಥವಾಗಲಿಲ್ಲ"—ಎಂದು ಮನೆಯಿಂದ ಆಚೆ ಕಳಿಸಿದರು. ಬಡತನವೊಂದು ಅಪರಾಧವಲ್ಲ. ಆದರೆ ಬಡತನದ ಹೆಸರಿನಲ್ಲಿ ಕಳವು ಮಾಡುವುದು, ಸುಳ್ಳು ಹೇಳುವುದು ಮಹಾಪ ರಾಧ. ಮಾನವತೆಯಿಂದ ತುಡಿಯುವ ಬೀಚಿ ಅವ್ಯವಹಾರ, ಅಸತ್ಯಗಳನ್ನು ಕಂಡಾಗ ಕ್ಷಮಿಸುತ್ತಿರಲಿಲ್ಲ.

1958ರಲ್ಲಿ ಬೀಚಿಯುವರು ಬೆಂಗಳೂರಿಗೆ ವರ್ಗವಾಗಿ ರೇಲ್ವೆ ಪೊಲೀಸ್ ಆಫೀಸಿಗೆ ಸೇರಿದರು. ಅಲ್ಲಿ ಕೆಲವು ಕಾಲ ಸೇವೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಲ್ಲಿಸಿ ಬೆಂಗಳೂರಿನ ಸಿ.ಐ.ಡಿ. ಸ್ಪೆಷಲ್ ಬ್ರ್ಯಾಂಚಿಗೆ ವರ್ಗವಾಗಿ ಹೋದರು. ಅಲ್ಲಿ ಅವರಿಗೆ ಬಡತಿ ದೊರೆತು ಆಫೀಸಿನ ಸೂಪರಿಂಟೆಂಡೆಂಟ್‌ರಾದರು. ಅಲ್ಲಿರುವಾಗಲೇ 1968ರಲ್ಲಿ ನಿವೃತ್ತರಾದರು.

ಪೊಲೀಸ್ ಖಾತೆಯಲ್ಲಿ ಒಬ್ಬ ಅಟೆಂಡರ್ ಆಗಿ ಕೆಲಸಕ್ಕೆ ಸೇರಿದ ಬೀಚಿ ಬಳ್ಳಾರಿ, ಮದ್ರಾಸ್, ಹೊಸಪೇಟೆ ಹಾಗೂ ಬೆಂಗಳೂರಿನ ಆಫೀಸುಗಳಲ್ಲಿ ದುಡಿದು ತಮ್ಮ ದಕ್ಷತೆ, ಪ್ರಾಮಾಣಿಕತೆ, ಸ್ಪಷ್ಟತೆಗಳಿಂದ ಮೇಲ್ದರ್ಜೆಗೆ ಮುಟ್ಟಿದರು, ನಿವೃತ್ತರಾದ ಮೇಲೂ ಬೆಂಗಳೂರಿನಲ್ಲಿಯೇ ವಾಸ ಮಾಡಿದರು.

ಸಂಸಾರ

1933ನೆಯ ಶ್ರಾವಣ ಮಾಸದಲ್ಲಿ ಸೀತಾಬಾಯಿಯವರೊಂದಿಗೆ ಮದುವೆಯಾದ ಬೀಚಿಯವರಿಗೆ ಏಳು ವರ್ಷ ಮಕ್ಕಳಾಗಲಿಲ್ಲ. ಸಂಪ್ರದಾಯಸ್ಥ ಮನೆತನದಿಂದ ಬಂದ ಸೀತಾಬಾಯಿಯವರಿಗೆ ಚಿಂತೆ ಹೆಚ್ಚಾಯಿತು. ದೇವರಿಗೆ ಹರಕೆ ಹೊತ್ತರು. ಸಾಧು-ಸಂತರ ಆಶೀರ್ವಾದ ಪಡೆದರು. 1940ರಲ್ಲಿ ಇವರಿಗೆ ಗಂಡು ಮಗ ಹುಟ್ಟಿದ. ಆತನ ಹೆಸರು ಶ್ರೀನಿವಾಸಮೂರ್ತಿ. ಮುಂದೆ ಈತ ವೈದ್ಯಕೀಯ ಶಿಕ್ಷಣ ಮುಗಿಸಿ ಡಾಕ್ಟರ್ ಆದರು. ಈಗ ಅವರು ಬೆಂಗಳೂರಿನ ಶಾಂತಿನಗರದಲ್ಲಿ ಸ್ವಂತ ದವಾಖಾನೆ ನಡೆಸುತ್ತಿದ್ದಾರೆ.

ಶ್ರೀನಿವಾಸಮೂರ್ತಿ ಹುಟ್ಟಿದ ಕೆಲವು ವರ್ಷಗಳ ನಂತರ ಬೀಚಿ ದಂಪತಿಗಳಿಗೆ ಎರಡನೆಯ ಮಗ ಹುಟ್ಟಿದ. ಆತನ ಹೆಸರು ರವೀಂದ್ರ. ಸಂಸ್ಕೃತ ಓದಿನಲ್ಲಿ ಆಸಕ್ತಿ. ಕಾಲೇಜಿನಲ್ಲಿ ಕನ್ನಡದಲ್ಲಿ ಓದು. ಪ್ರಸಿದ್ಧ ಕಾದಂಬರಿಕಾರರೂ-ವ್ಯಾಯಾಮಪಟುಗಳೂ ಆದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆ. ವಿ. ಐಯ್ಯರರ ಶಿಷ್ಯನಾಗಿ ಗರಡಿ ತಾಲೀಮು ಮಾಡಿ ಮೈ ಹದಗೊಳಿಸಿದ್ದ. ಬೀಚಿಯು ಸಾಹಿತ್ಯ ಸೇವೆಯಲ್ಲಿ ಅನೇಕ ಉಪಯುಕ್ತ ಸಲಹೆಗಳನ್ನು ನೀಡುತ್ತಿದ್ದ. ಹಸ್ತಪ್ರತಿಯಲ್ಲಿ ಕನ್ನಡ ದೋಷಗಳು ಹುಡುಕಿ ತಿದ್ದುತ್ತಿದ್ದ. ಬಿ.ಕಾಂ ವರೆಗೆ ಓದಿ ಪದವಿ ಪಡೆಯಲು ಕಾದಿದ್ದ. ಬೀಚಿ ತನ್ನ ಇಬ್ಬರು ಮಕ್ಕಳನ್ನು ಪ್ರೀತಿಯಿಂದ 'ಟ್ರಿಮ್ಮಿ'—'ಟ್ರಿಕ್ಕಿ' ಎಂದು ಕರೆಯುತ್ತಿದ್ದರು.

ಆರೋಗ್ಯದಿಂದಿದ್ದ ರವೀಂದ್ರನಿಗೆ ಒಮ್ಮಿಂದೊಮ್ಮೆಲೆ ಜ್ವರ ಕಾಣಿಸಿಕೊಂಡಿತು. ವೈದ್ಯೋಪಚಾರಕ್ಕೆ ಜ್ವರ ತಗ್ಗಲಿಲ್ಲ. ಮೂರು ವಾರ ಕಾಡಿಸಿದ ಜ್ವರ ಟೈಫಾಯ್ಡ್. 1967 ನವೆಂಬರ್ ಆರರಂದು ರವೀಂದ್ರ ಕಣ್ಣು ಮುಚ್ಚಿದಾಗ ಬೀಚಿ ದಂಪತಿಗಳು ಕಣ್ಣೀರ ಕೋಡಿಯಲ್ಲಿ ಮುಳುಗಿದರು.

1948ರ ಸುಮಾರು ಅವರು ಮದ್ರಾಸ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಮೂರನೆಯ ಗಂಡು ಮಗು ಹುಟ್ಟಿತು. ಆದರೆ ಅದು ಕೇವಲ ಮೂರು ತಿಂಗಳಲ್ಲಿ ಸ್ವರ್ಗಸ್ಥವಾಯಿತು. ಎಲ್ಲರನ್ನೂ ನಗಿಸುತ್ತಿದ್ದ ಬೀಚಿ ಎಷ್ಟೋ ಬಾರಿ ಇಂಥ ದುಃಖದಿಂದ ಅತ್ತಿದ್ದಾರೆ.

ಬೀಚಿಯವರೊಂದಿಗೆ ನಲವತ್ತೇಳು ವರ್ಷ ಬಾಳುವೆ ನಡೆಸಿದ ಸಹಧರ್ಮಿಣಿ ಸೀತಾಬಾಯಿ, ಸಂಪ್ರದಾಯಸ್ಥಳು. ದೇವರು–ಧರ್ಮ, ಮಠ–ಪೀಠಗಳ ಬಗೆಗೆ ಬೀಚಿಯ ವಿಚಾರಗಳು ಬೇರೆಯಾಗಿದ್ದರೂ ಸೀತಾಬಾಯಿ ಮಾತ್ರ ಇಂದಿಗೂ ದೇವರು–ಪೂಜೆ–ಪುನಸ್ಕಾರಗಳನ್ನು ಬಿಡಲಿಲ್ಲ. ಗಂಡನ ಹೆಜ್ಜೆಯಲ್ಲಿ ಹೆಜ್ಜೆ ಹಾಕುತ್ತ ಬಾಳಿನಲ್ಲಿ ಸಮತೋಲವನ್ನು ಕಾಯ್ದುಕೊಂಡರು.

ಬರೆಹಗಾರ ಬೀಚಿ

Sri Vidyabharathi Book Centre, Sringeri

ಹೈಸ್ಕೂಲಿನಲ್ಲಿದ್ದಾಗ ಇವರಿಗೆ ಓದುವ ಚಟ ಬೆಳೆಯಿತು.

CC-O. In Public Domain. Digitized by eGangotri

ಮಲೆಬೆನ್ನೂರ ಸತ್ಯವಂತರಾಯರೆಂಬುವರು ಇಂಗ್ಲಿಷ್ ಸಾಹಿತ್ಯ ವನ್ನು ತುಂಬ ಓದುತ್ತಿದ್ದರು. ಅಸ್ಪೃಶ್ಯತಾ ಚಳುವಳಿ, ಸ್ತ್ರೀ ಸ್ವಾತಂತ್ರ್ಯ, ವಿಧವಾ ವಿವಾಹ ಮೊದಲಾದ ಸಾಮಾಜಿಕ ಚಳುವಳಿ ಗಳಲ್ಲಿ ಸಕ್ರಿಯರಾಗಿ ದುಡಿಯುತ್ತಿದ್ದರು. ಬೀಚಿಗೆ ತಮ್ಮಲ್ಲಿದ್ದ ಸಾಹಿತ್ಯ ಓದಲು ಕೊಡುತ್ತಿದ್ದರು. ಕನ್ನಡದಲ್ಲಿ ಓದಿದ್ದು ಹೈಸ್ಕೂಲಿನ ಕೊನೆಯ ಎರಡು ವರ್ಷಗಳಲ್ಲಿ. ಓದಿದ್ದ ಒಂದೆರಡು ಪುಸ್ತಕಗಳು ಮಾತ್ರ ಬೀಚಿಯವರ ಮನೆಯ ಮಾತು ಕನ್ನಡ ವಾಗಿದ್ದರೂ ಅವರು ಕಲಿತುದು ತೆಲುಗು–ಇಂಗ್ಲಿಷ್ ಸ್ವಲ್ಪ ಸಂಸ್ಕೃತ. ಬೀಚಿಯವರು ಕನ್ನಡ ಹೆಚ್ಚಾಗಿ ಓದಿದ್ದು ಕನ್ನಡ ಬರಹ ಗಾರ ಎನಿಸಿಕೊಂಡ ಮೇಲೆ.

1934ರಲ್ಲಿ ಇವರು ಗದಗಿನಲ್ಲಿದ್ದಾಗ, ಅದೇ ಊರಿನ ವ್ಯಕ್ತಿ ಯೊಬ್ಬರನ್ನು ವೈಯಕ್ತಿಕವಾಗಿ ಟೀಕಿಸಿ ಸ್ಥಳೀಯ ವಾರಪತ್ರಿಕೆ ಯಲ್ಲಿ ಒಂದು ಲೇಖನ ಪ್ರಕಟವಾಗಿತ್ತು. ಇದು ಬೀಚಿಯವರ ಮನಸ್ಸಿಗೆ ಹಿಡಿಸಲಿಲ್ಲ. ಆ ಪತ್ರಕರ್ತರಿಗೆ ಚುರುಕು ಮುಟ್ಟಿಸ ಬೇಕೆಂದು ಒಂದು ಲೇಖನವನ್ನು ಕನ್ನಡದಲ್ಲಿ ಬರೆದು ಆಗ ಮದ್ರಾಸಿನಿಂದ ಹೊರಡುತ್ತಿದ್ದ 'ಪ್ರಜಾಮತ' ಪತ್ರಿಕೆಗೆ ಕಳಿಸಿ ದರು. ಅದು ಪ್ರಕಟವಾಯಿತು. ಆಗ ಇವರಿಗೆ ಅತ್ಯಂತ ಆನಂದ ವಾಯಿತು. ಕನ್ನಡದಲ್ಲಿ ಬರೆಯಬಲ್ಲೆ ಎಂಬ ಧೈರ್ಯ ಮೂಡಿತು. ಮುಂದೆ ಕೆಲವು ಕಾಲ ಏನೂ ಬರೆಯಲಿಲ್ಲ. ಆದರೆ ಬರೆಯ ಬೇಕೆಂದು ಹೃದಯ ಹಂಬಲಿಸುತ್ತಿತ್ತು.

ಅಷ್ಟರಲ್ಲಿ ಇವರು ಗದಗ್ ಬಿಟ್ಟು ಹುಬ್ಬಳ್ಳಿಗೆ ಹೋಗಿ ನೆಲೆಸ ಬೇಕಾಯಿತು. ಅಲ್ಲಿ ಸಾಹಿತ್ಯಭಾಂಡಾರದ ಗೋವಿಂದರಾಯರ ಪರಿ ಚಯವಾದರೂ ಒಂದೂ ಕನ್ನಡ ಪುಸ್ತಕ ಓದಲಿಲ್ಲ. ಆದರೆ ಬೀದಿ ಯಲ್ಲಿ ಮಾರುತ್ತಿದ್ದ ಅಗ್ಗದ ರೊಮ್ಯಾಂಟಿಕ್ ಇಂಗ್ಲಿಷ್ ಸಾಹಿತ್ಯ ವನ್ನು ತಪ್ಪದೇ ಓದುತ್ತಿದ್ದರು.

Sri Vidya Bharathi Book Centre, Sringeri

CC-O. In Public Domain. Digitized by eGangotri

ಒಮ್ಮೆ ಅದೇನೋ ಸ್ಫೂರ್ತಿಯಿಂದ "Unwanted Intrusion" ಎಂಬ ಇಂಗ್ಲಿಷ್ ಲೇಖನ ಬರೆದು ಇಟ್ಟಿದ್ದರು. ಅದೇ ದಿನ ಬಳ್ಳಾರಿಯಿಂದ ಇವರ ಹಿತೈಷಿಗಳಾದ ಮಲೆಬೆನ್ನೂರು ಸತ್ಯವಂತರಾಯರು ಬಂದರು. ಇಂಗ್ಲಿಷಿನಲ್ಲಿ ಪಾಂಡಿತ್ಯವುಳ್ಳ ಸತ್ಯವಂತರಾಯರಿಗೆ ಬೀಚಿ ತಾವು ಬರೆದ ಇಂಗ್ಲಿಷ್ ಲೇಖನ ಓದಿ ಹೇಳಿದರು. ಸತ್ಯವಂತರಾಯರು,

"ನೀನು ಕನ್ನಡದಾಗೆ ಯಾಕೆ ಬರೀಬಾರದು ?"

ಎಂದು ಕೇಳಿದರು. ತಕ್ಷಣ ಬೀಚಿಯವರು

"ಯಾಕೆ ? ನನ್ನ ಇಂಗ್ಲಿಷ್ ಅಷ್ಟು ಕೆಟ್ಟದೇನು ?"

ಎಂದು ಕೇಳಿಯೇಬಿಟ್ಟರು. "ನಿನ್ನ ಇಂಗ್ಲಿಷ್ ಚೆನ್ನಾಗಿಯೇ ಇದೆ. ಆದರೆ ಯಾರೇ ಬರೀಲಿ, ತಮ್ಮ ಮಾತೃಭಾಷೆಯಲ್ಲಿ ಬರೆದಷ್ಟು ಸಲೀಸಾಗಿ, ಬೇರೆ ಭಾಷೆಯಲ್ಲಿ ಬರೆಯುವುದಾಗುವುದಿಲ್ಲ" ಎಂದರು. ಆದರೆ ಬೀಚಿಯವರಿಗೆ ಸತ್ಯವಂತರಾಯರ ಈ ಮಾತು ಕೆಲವು ಕಾಲ ಪಥ್ಯವೆನಿಸಲಿಲ್ಲ. ಆದ್ದರಿಂದ ಬೀಚಿ ಕೆಲವು ವರ್ಷ ಕನ್ನಡದಲ್ಲೂ–ಇಂಗ್ಲಿಷಿನಲ್ಲೂ ಬರೆಯಲಿಲ್ಲ.

ಆದರೆ ಸತ್ಯವಂತರಾಯರು ಬೀಚಿಯವರ ಹೃದಯದಲ್ಲಿ ಕನ್ನಡದ ಬೀಜ ಬಿತ್ತಿದ್ದರು. ಕನ್ನಡ ಸಾಹಿತ್ಯವೆಂಬ ಮಹಾನಗರಕ್ಕೆ ಅವರು ದಾರಿ ತೋರಿದ್ದರು. ಸತ್ಯವಂತರಾಯರಿಂದ ಕನ್ನಡದ ದೀಕ್ಷೆ ಪಡೆದ ಬೀಚಿ ಕನ್ನಡ ಹಾಸ್ಯ ಸಾಹಿತ್ಯದಲ್ಲಿ ಸವ್ಯಸಾಚಿಯೆನಿಸಿಕೊಂಡರು.

ಖ್ಯಾತ ನೃತ್ಯಪಟುಗಳಾದ ಕುಲಕರ್ಣಿ ಶ್ರೀನಿವಾಸರ ಪರಿಚಯ ಹುಬ್ಬಳ್ಳಿಯಲ್ಲಿ ಬೀಚಿಯವರಿಗೆ ಆಯಿತು. ಶ್ರೀನಿವಾಸರು ಆಗ ಪಂಡಿತ ತಾರಾನಾಥರು ಆರಂಭಿಸಿದ್ದ 'ಪ್ರೇಮ' ಪತ್ರಿಕೆಯ ಸಂಪಾದಕರಾಗಿದ್ದರು. 'ಬಿಜಲೀಕಾ ಪಂಖಾ' ಎಂಬ ಹಿಂದೀ ಕಾದಂಬರಿಯ ಕಥೆಯನ್ನು ಹಯವದನರಾಯರಿಂದ ಕೇಳಿ ಬೀಚಿ

Sri Vidyabharathi Book Centre, Sringeri

 CC-O. In Public Domain. Digitized by eGangotri

'ಎರಡು ಕುನ್ನಿ' ಎಂಬ ಚಿಕ್ಕ ಕಥೆಯನ್ನು ಬರೆದರು. 1935ರಲ್ಲಿ 'ಪ್ರೇಮ' ಪತ್ರಿಕೆಯಲ್ಲಿ ಅದು ಪ್ರಕಟವಾಯಿತು. ಇದೇ ಬೀಚಿಯವರ ಸಾಹಿತ್ಯದ ನಾಂದಿ. ಮುಂದೆ ಏಳೆಂಟು ವರ್ಷ ಏನೂ ಬರೆಯಲಿಲ್ಲ.

ಪೊಲೀಸ್ ಖಾತೆಗೆ ಸೇರಿ ಬೀಚಿ ಬಳ್ಳಾರಿಗೆ ಬಂದಿದ್ದರು. ಒಮ್ಮೆ ಬೆಟಗೇರಿ ಕೃಷ್ಣಶರ್ಮರು ಬಳ್ಳಾರಿಯ ನಾಡಹಬ್ಬಕ್ಕೆ ಆಗಮಿಸಿದ್ದರು. ಬೀಚಿ ಸಹಜವಾಗಿ ಕೃಷ್ಣಶರ್ಮರ ಪರಿಚಯ ಮಾಡಿಕೊಂಡರು. ಕೃಷ್ಣಶರ್ಮರು ಆಗ 'ಜಯಂತಿ' ಪತ್ರಿಕೆಯ ಸಂಪಾದಕರಾಗಿದ್ದರು. ಯುವ ಬರಹಗಾರರನ್ನು ಪ್ರೋತ್ಸಾಹಿಸುತ್ತಿದ್ದ ಕೃಷ್ಣಶರ್ಮರು ಬೀಚಿಯವರನ್ನು ಪ್ರೋತ್ಸಾಹಿಸಿ 'ಗರುಡ ಪುರಾಣ' ಮತ್ತು 'ನಾನೇ ಸತ್ತಾಗ' ಎಂಬ ಎರಡು ಕಿರುನಾಟಕಗಳನ್ನು ಬರೆಯಿಸಿ 'ಜಯಂತಿ'ಯಲ್ಲಿ ಪ್ರಕಟಿಸಿದರು.

ಮದರಾಸಿಗೆ ಹೋದಾಗ ಅಲ್ಲಿಯ ಬಾನುಲಿ ಕೇಂದ್ರದ ಕನ್ನಡ ವಿಭಾಗದ ಶಿವಸ್ವಾಮಿಯವರ ಪ್ರೋತ್ಸಾಹದಿಂದ ಕೆಲವು ಪುಟ್ಟ ನಾಟಕಗಳನ್ನು ಬರೆದು ಆಡಿದರು. ಹುಬ್ಬಳ್ಳಿಯಲ್ಲಿದ್ದಾಗ ಹೆಂಡತಿಗೊಂದು ಕನ್ನಡ ಪುಸ್ತಕ ತಂದು ಓದಲು ಕೊಟ್ಟಿದ್ದರು. ಅದು ಅ. ನ. ಕೃಷ್ಣರಾಯರು ಬರೆದ 'ಸಂಧ್ಯಾರಾಗ' ಕಾದಂಬರಿಯಾಗಿತ್ತು. ಹೆಂಡತಿಯ ಒತ್ತಾಯದ ಮೇಲೆ ಸಂಧ್ಯಾರಾಗ ಓದಿದ್ದ ಬೀಚಿಯವರು ಆಗಾಗ್ಗೆ ಕನ್ನಡ ಪುಸ್ತಕಗಳನ್ನು ಓದಲಾರಂಭಿಸಿದರು. ಶ್ರೀರಂಗರ 'ವಿಶ್ವಾಮಿತ್ರ ಸೃಷ್ಟಿ', ಜಿ. ಪಿ. ರಾಜರತ್ನಂರ 'ರತ್ನನ ಪದಗಳು' ಶಂ. ಬಾ. ಜೋಷಿಯವರ 'ಯಕ್ಷಪ್ರಶ್ನೆ' ಕೆ. ವಿ. ಅಯ್ಯರ್‌ರ 'ರೂಪದರ್ಶಿ' ಮೊದಲಾದ ಅನೇಕ ಕೃತಿಗಳು ಬೀಚಿಯ ಮೇಲೆ ಪ್ರಭಾವ ಬೀರಿದುವು.

ಒಮ್ಮೆ ಬಳ್ಳಾರಿಗೆ ಖ್ಯಾತ ಸಂಶೋಧಕ ಶಂ.ಬಾ. ಜೋಷಿ ಅವರು ಬಂದಿದ್ದರು. ಬೀಚಿಯವರ ಮನೆಯಲ್ಲಿ ತಂಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಬೀಚಿ ತಾನು ಬರೆದ ಲೇಖನ-ನಾಟಕಗಳನ್ನು ಅವರಿಗೆ ತೋರಿಸಿದರು. ಕಿರಿಯರನ್ನು ಪ್ರೋತ್ಸಾಹಿಸುವ ಶಂ.ಬಾ. ಜೋಷಿ ಬೀಚಿಯವರ ಪುಸ್ತಕಗಳಿಗೆ ಪ್ರಕಾಶಕರನ್ನು ಹುಡುಕಿಕೊಟ್ಟರು. ಶಂ.ಬಾ. ಜೋಷಿಯವರ ಮಾತಿನ ಮೇಲೆ ಧಾರವಾಡ ಸಮಾಜ ಪುಸ್ತಕಾಲಯದ ಒಡೆಯರಾದ ಶ್ರೀ ಭಾಲಚಂದ್ರ ಘಾಣೇಕರರು 'ಮಾತ್ರೆಗಳು' ಹಾಗೂ 'ರೇಡಿಯೋ ನಾಟಕಗಳು' ಎಂಬ ಎರಡು ಗ್ರಂಥಗಳನ್ನು ಪ್ರಕಟಿಸಿದರು.

ನಿತ್ಯವೂ ದಿನಪತ್ರಿಕೆಯನ್ನು ಓದುತ್ತಿದ್ದ ಬೀಚಿ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಪೊತೆನ್ ಜೊಸೆಫ್‌ರು ಬರೆಯುತ್ತಿದ್ದ 'ಓವ್ಹರ್ ಎ ಕಪ್ ಆಫ್ ಟೀ' ಎಂಬ ಹಾಸ್ಯ ಚಟಾಕಿಯನ್ನು ವಿಶೇಷವಾಗಿ ಗಮನಿಸಿದ್ದರು. ಇದರಿಂದ ತಾವೂ ಕನ್ನಡದಲ್ಲಿ ಇಂಥ ಚಟಾಕಿ ಬರೆಯಬೇಕೆಂಬ ಮನಸ್ಸಾಯಿತು. ಇದನ್ನು ಮಿತ್ರರಾದ, ನ್ಯಾಯವಾದಿ ಕೋ. ಚೆನ್ನಬಸಪ್ಪನವರೊಂದಿಗೆ ಪ್ರಸ್ತಾಪಿಸಿದರು. "ಯೋಚನೆ ಚನ್ನಾಗಿದೆ. ಹುಬ್ಬಳ್ಳಿಗೆ ಹೋಗಿ ಮಿತ್ರರಾದ ಶ್ರೀ ಪಾಟೀಲ ಪುಟ್ಟಪ್ಪನವರನ್ನು ಕಂಡು ಬರೋಣ" ಎಂದರು. ಆಗ ಪುಟ್ಟಪ್ಪನವರು 'ವಿಶಾಲ ಕರ್ನಾಟಕ'ದ ಸಂಪಾದಕರಾಗಿದ್ದರು. ಬೀಚಿ ಮತ್ತು ಚನ್ನಬಸಪ್ಪನವರು ಹುಬ್ಬಳ್ಳಿಗೆ ಬಂದಾಗ ಪಾಟೀಲ ಪುಟ್ಟಪ್ಪನವರು ಊರಲ್ಲಿ ಇರಲಿಲ್ಲ. ಆದರೆ ಬೇರೆಯವರೊಡನೆ ಮಾತಾಡಿ ಒಪ್ಪಿಗೆ ಪಡೆದು ಬಂದರು. ನಿತ್ಯವೂ 'ವಿಶಾಲ ಕರ್ನಾಟಕ'ದಲ್ಲಿ 'ಕೆನೆಮೊಸರು' ಎಂಬ ವಿಭಾಗ ಆರಂಭವಾಯಿತು. ಆ ಕಾಲಂನಲ್ಲಿ ಬೀಚಿ ಕೊನೆಯಲ್ಲಿ ಒಂದು ಸ್ವತಂತ್ರ ಚುಟುಕು ಕೊಡುತ್ತಿದ್ದರು. 'ಕೆನೆಮೊಸರು' ವಿಭಾಗ ಅತ್ಯಂತ ಜನಪ್ರಿಯವಾಗಿ ಬೀಚಿಯನ್ನು ಕರ್ನಾಟಕದ ಜನ ಗುರುತಿಸುವಂತಾಯಿತು. ಆದರೆ ಪಾಟೀಲ ಪುಟ್ಟಪ್ಪನವರು ಹೆಚ್ಚಿನ ವ್ಯಾಸಂಗಕ್ಕೆ ಅಮೇರಿಕೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತೆರಳಿದ್ದರಿಂದ ವಿಶಾಲ ಕರ್ನಾಟಕದೊಡನೆ ಇರುವ ಸಂಬಂಧ ಕಡಿದು ಹೋಯಿತು.

'ಕೆನೆಮೊಸರು' ವಿಭಾಗದಲ್ಲಿ ಬರುತ್ತಿದ್ದ ಚುಟುಕುಗಳನ್ನು ಸಂಗ್ರಹಿಸಿ 'ತಿಂಮನ ತಲೆ' ಎಂಬ ಹಾಸ್ಯ ರಸಾಯನದ ಪುಸ್ತಕ ಬೆಳಕಿಗೆ ಬಂದಿತು. ಅದಕ್ಕೆ ಮದರಾಸು ಸರಕಾರವು ಆಗ ಐದು ನೂರು ರೂಪಾಯಿ ಬಹುಮಾನವನ್ನು ನೀಡಿ ಗೌರವಿಸಿತು. 'ತಿಂಮನ ತಲೆ' ಹನ್ನೊಂದು ಮುದ್ರಣಗಳನ್ನು ಕಂಡು ವಿಕ್ರಮ ಸ್ಥಾಪಿಸಿದೆ.

ಅನಂತರ ಕೋ. ಚೆನ್ನಬಸಪ್ಪನವರು ಹೊರಡಿಸುತ್ತಿದ್ದ 'ರೈತ' ಪತ್ರಿಕೆಯಲ್ಲಿ 'ಬೇವಿನ ಕಟ್ಟೆ' ಎಂಬ ವಿಭಾಗದಲ್ಲಿ ಬೀಚಿ ಬರೆಯುತೊಡಗಿದರು.

ಒಮ್ಮೆ ಬಳ್ಳಾರಿಗೆ ಬಂದ ಅ. ನ. ಕೃಷ್ಣರಾಯರ ಪರಿಚಯ ಬೀಚಿಯವರಿಗೆ ಆಯಿತು. ಕನ್ನಡ ಬರೆಹಗಾರರ ಹೊಸ ಪಡೆ ಯನ್ನೇ ಕಟ್ಟುತ್ತಿದ್ದ ಕೃಷ್ಣರಾಯರು ಬೀಚಿಯವರ 'ದಾಸಕೂಟ' ಕಾದಂಬರಿಯನ್ನು ಹಸ್ತಪ್ರತಿಯಲ್ಲಿ ಓದಿ ಸೂಕ್ತ ಸಲಹೆ ನೀಡಿ ದರು. ಪ್ರಕಾಶಕರನ್ನು ದೊರಕಿಸಿಕೊಟ್ಟು–ತಾವೇ ಮುನ್ನುಡಿ ಬರೆದು ಬೀಚಿಯವರನ್ನು ಬೆಂಬಲಿಸಿದರು. ಒಟ್ಟಿನಲ್ಲಿ 1950ರಲ್ಲಿ 'ತಿಂಮನ ತಲೆ' ಹಾಗೂ 'ದಾಸಕೂಟ' ಪ್ರಕಟವಾಗಿ ಬೀಚಿಯವರ ಹೆಸರು ಕನ್ನಡ ಸಾಹಿತ್ಯ ದಿಗಂತದಲ್ಲಿ ಮೂಡಿ ಎಲ್ಲರ ಗಮನ ಸೆಳೆ ಯಿತು. ಹಾಸ್ಯ ಸಾಹಿತ್ಯಕ್ಕೆ ಬಳ್ಳಾರಿ ಬೀಚಿಯೆಂಬ ಹೆಸರು ಅನ್ವರ್ಥಗೊಂಡಿತು.

'ದಾಸಕೂಟ' ಪ್ರಕಟವಾದಾಗ ಮತ್ತು 'ಖಾದಿಸೀರೆ' ಎಂಬ ಕಾದಂಬರಿ ಬೆಳಕಿಗೆ ಬಂದಾಗ ಅವುಗಳಲ್ಲಿ ಮತೀಯಭಾವನೆಗಳ ಖಂಡನೆಯಾಗಿದೆಯೆಂದು ಕೆಲವು ಮತಾಭಿಮಾನಿಗಳು ಅವುಗಳ ಬಗ್ಗೆ ಪ್ರತಿಭಟಿಸಿದರು. ನಿಜವಾಗಿಯೂ ಪುರೋಗಾಮಿ ವಿಚಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಣಿಯ ಬೀಚಿ ಯಾರನ್ನೂ ಟೀಕಿಸಿರಲಿಲ್ಲ. ಆದರೆ ಧರ್ಮ-ಜಾತಿ-ದೇವರುಗಳ ಹೆಸರಿನಲ್ಲಿ ನಡೆಯುವ ಅನಾಚಾರ-ಅಂಧ ಶ್ರದ್ಧೆ-ಅವಿವೇಕಗಳನ್ನು ಬಯಲಿಗೆಳೆದಿದ್ದರು. ಬೀಚಿಯುವರು ಅಂಜದೆ-ಅಳುಕದೆ ಮುನ್ನಡೆದರು. 1958ರಲ್ಲಿ ಬೆಂಗಳೂರಿಗೆ ವರ್ಗವಾಗಿ ಹೋಗುವವರೆಗೆ ಬೀಚಿಯುವರು ಬರೆದ ಗ್ರಂಥಗಳು ಕೇವಲ ಒಂಬತ್ತು. ಬೀಚಿಯ ಬರಹಗಳಿಗೆ ಬೆಂಗಳೂರಿನಲ್ಲಿ ಸುಗ್ಗಿ ಕಾಲ ಬಂದಿತು. ಅಲ್ಲಿ ಇಪ್ಪತ್ಮೂರು ವರ್ಷಗಳ ವಾಸ್ತವ್ಯದಲ್ಲಿ ಬೀಚಿಯುವರು ಐವತ್ತಕ್ಕೂ ಮಿಕ್ಕು ಗ್ರಂಥಗಳನ್ನು ಪ್ರಕಟಿಸಿದರು.

ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ತಾಯಿನಾಡು, ಕನ್ನಡಪ್ರಭ ಮೊದಲಾದ ದಿನ ಪತ್ರಿಕೆಗಳಲ್ಲಿ ಸುಧಾ, ಪ್ರಜಾಮತ, ಪ್ರಪಂಚ, ಕರ್ಮವೀರ, ವಾರಪತ್ರಿಕೆಗಳಲ್ಲಿ ಮಯೂರ, ತುಷಾರ, ಕಸ್ತೂರಿ, ಜಯಂತಿ, ಮೊದಲಾದ ಮಾಸಪತ್ರಿಕೆಗಳಲ್ಲಿ ಬೀಚಿಯ ವರು ನಿರಂತರವಾಗಿ ಬರೆದರು. ಸುಧಾ ಪತ್ರಿಕೆಯ ಆರಂಭದಿಂದ 1980ರ ಕೊನೆಯುವರೆಗೂ ಸತತವಾಗಿ 16 ವರ್ಷದವರೆಗೂ 'ನೀವು ಕೇಳಿದಿರಿ ?' ಎಂಬ ವಿಭಾಗದಲ್ಲಿ ಬರುವ ಪ್ರಶ್ನೆಗಳಿಗೆ ಸಂಕ್ಷಿಪ್ತ ವಾಗಿ, ಚುರುಕಾಗಿ, ವ್ಯಂಗ್ಯವಾಗಿ ವಿಚಾರ ಪೂರ್ಣವಾಗಿ ಉತ್ತರಿಸಿ ದರು. ಈ ವಿಭಾಗ ಅತ್ಯಂತ ಜನಪ್ರಿಯುವಾಯಿತು. ಮುಂದೆ ಇದೇ ಪ್ರಶ್ನೋತ್ತರಗಳನ್ನೂ ಸಂಗ್ರಹಿಸಿ 'ಉತ್ತರ ಭೂಪ' ಎಂಬ ಗ್ರಂಥ ಪ್ರಕಟಿಸಿದರು.

ಬೀಚಿಯುವರು ಹರಟೆ, ಚುಟುಕ ನಾಟಕ, ಕಾದಂಬರಿ, ಪ್ರವಾಸಕಥನ, ಕಥೆ, ಕವನ, ಆತ್ಮಕಥೆಗಳನ್ನು ಬರೆದಿದ್ದಾರೆ. ಡಿ. ವಿ. ಗುಂಡಪ್ಪನವರ 'ಮಂಕುತಿಮ್ಮನ ಕಗ್ಗ'ದಿಂದ ಸ್ಫೂರ್ತಿ ಗೊಂಡು 'ಅಂದನಾ ತಿಮ್ಮ' ಎಂಬ ಚೌಪದಿಗಳನ್ನು ಬರೆದಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನಂತೆ ನೀನಾಗು ನಿನ್ನ ನೀ ಅರಿ ಮೊದಲು
ಚೆನ್ನೆಂದು ದೊಡ್ಡವರ ಅನುಕರಿಸಬೇಡ
ಏನಾಯ್ತು ಮರಿಕತ್ತೆ ? ಚೆಲುವಿತ್ತು ಮುದ್ದಿತ್ತು
ತನ್ನಪ್ಪನಂತಾಗಿ ಹಾಳಾಯ್ತೋ ತಿಂಮ.

ಇಂಥ ಚೌಪದಿಗಳಲ್ಲಿ ಬೀಚಿಯವರು ಜೀವನದ ಗಾಢ ಅನುಭವ ತುಂಬಿದ್ದಾರೆ. ತಾನು ಕಂಡುಂಡ ಬದುಕಿನ ಸತ್ಯವನ್ನು ಅನಾವರಣ ಗೊಳಿಸಿದ್ದಾರೆ.

ಅವರ ಮಾನಸಪುತ್ರ ತಿಂಮ ಬಹುಪಾಲು ಕೃತಿಗಳಲ್ಲಿ ತುಂಬಿಕೊಂಡಿದ್ದಾನೆ. ಅವರ ಅನೇಕ ಬರಹಗಳಲ್ಲಿ ತಿಂಮನೇ ಪ್ರಮುಖ ಪಾತ್ರಧಾರಿ. ತಿಮ್ಮ ಕೆಲವು ವೇಳೆ ಜಾಣನಂತೆ-ಕೆಲವು ವೇಳೆ ದಡ್ಡನಂತೆ ವರ್ತಿಸುತ್ತಾನೆ. ಆತನಾಡುವ ಮಾತು ಮೂಲ ಭೂತ ಸಮಸ್ಯೆಯ ಮೇಲೆ ವೈಚಾರಿಕ ಬೆಳಕು ಚೆಲ್ಲುತ್ತವೆ.

ಬೀಚಿಯವರು ಒಟ್ಟಿಗೆ ಅರವತ್ತೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಮೂವತ್ತೊಂದು ಕಾದಂಬರಿಗಳಿವೆ. ಅವರ ಕೆಲವು ಕೃತಿಗಳ ಹೆಸರು ನೋಡಿದಾಗ ನಗು ಉಕ್ಕಿಬರುತ್ತದೆ. 'ಬ್ರಹ್ಮಚಾರಿಯ ಮಗ' 'ಸತ್ತವನು ಎದ್ದು ಬಂದಾಗ' 'ಬಂಗಾರದ ಕತ್ತೆ' 'ಮೂರು ಹೆಣ್ಣು ಐದು ಜಡೆ' 'ಮಾತನಾಡುವ ದೇವರು ಗಳು' 'ಸಂಪನ್ನರಿದ್ದಾರೆ ಎಚ್ಚರಿಕೆ !' 'ದೇವರಿಲ್ಲದ ಗುಡಿ' 'ಕನ್ನಡ ಎಮ್ಮೆ'. ಕೆಲವು ಕೃತಿಗಳ ಹೆಸರು ಅರ್ಥಗಾಂಭೀರ್ಯದಿಂದ ಕೂಡಿವೆ. 'ಬಿತ್ತಿದ್ದೇ ಬೇವು' 'ಉತ್ತರಭೂಪ' 'ಲಕ್ಷ್ಮೀಪೂಜೆ' 'ದಾಸಕೂಟ' 'ಸರಸ್ವತೀ ಸಂಹಾರ' 'ಹೆಣ್ಣು ಕಾಣದ ಗಂಡು' 'ದೇವನ ಹೆಂಡ' 'ಹುಲಿಯ ಬೆನ್ನಮೇಲಿಂದ' 'ನನ್ನ ಭಯಾಗ್ರಫಿ' ಮೊದಲಾದವು ವಿಶೇಷಾರ್ಥವನ್ನು ಧ್ವನಿಸುತ್ತವೆ.

ಬೀಚಿಯವರು ತಮ್ಮ ಜೀವನ ಚರಿತ್ರೆಗೆ ನನ್ನ 'ಭಯಾಗ್ರಫಿ' ಎಂದು ಕರೆದರು. ಮಡಿವಂತರಿಗೆ ಭಯವನ್ನುಂಟುಮಾಡು ವಂತಹ ಘಟನೆಗಳು [illegible]. ಬೀಚಿಯವರು ಇಲ್ಲಿ ತಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಜೀವನದ ಸಿಹಿ–ಕಹಿ ಅನುಭವಗಳನ್ನು ಬಿಚ್ಚು ಮಾತುಗಳಲ್ಲಿ ಹೇಳಿದ್ದಾರೆ. ಬದುಕಿನ ಸುಖ–ಸಂತೋಷಗಳಿಗೆ ಕುಠಾರಪ್ರಾಯವಾದ, ಮತಾಚಾರದ ಹೆಸರಿನಲ್ಲಿ ನಡೆಯುವ ಅಂಧಶ್ರದ್ಧೆ, ಅವಿವೇಕ, ಅನಾಚಾರಗಳನ್ನು ಬಯಲಿಗೆಳೆದಿದ್ದಾರೆ. ತಾನು ಮಾಡಿದ ತಪ್ಪು ಕೆಲಸ, ದುಶ್ಚಟ, ದುರಭಿಮಾನಗಳನ್ನು ಮುಚ್ಚುಮರೆಯಿಲ್ಲದೆ ಹೇಳಿದ್ದಾರೆ. ಭಯಾಗ್ರಫಿಯಲ್ಲಿ ಬೀಚಿಯವರು ಕೆಲವೆಡೆ ಶ್ರೀಸಾಮಾನ್ಯನಂತೆಯೂ, ಕೆಲವೆಡೆ ದಾರ್ಶನಿಕನಂತೆಯೂ ಕಾಣುತ್ತಾರೆ. ಬೀಚಿಯವರ ಭಯಾಗ್ರಫಿಗೆ ಪೂರಕವಾಗಿ 'ಮಾತನಾಡುವ ದೇವರುಗಳು' ಹಾಗೂ ಅವರು ರಷ್ಯಾ ಪ್ರವಾಸ ಮುಗಿಸಿ ಬಂದ ಬಳಿಕ ಬರೆದ 'ದೇವರಿಲ್ಲದ ಗುಡಿ' ಎಂಬ ಪ್ರವಾಸ ಕಥನವೂ ಸೇರುತ್ತವೆ. ಭಯಾಗ್ರಫಿಯಲ್ಲಿ ಇಲ್ಲದ ಅನೇಕ ಘಟನೆಗಳು ಇವೆರಡು ಗ್ರಂಥಗಳಲ್ಲಿವೆ.

ಬೀಚಿಯವರು ಅವರ ಸಾಹಿತ್ಯ ಕೃತಿಗಳಲ್ಲಿ ಸ್ವತಃ ಹಣಕಿ ಹಾಕಿದ್ದಾರೆ. ಅವರ ಪ್ರತಿನಿಧಿ ತಿಂಮ ಅನೇಕ ಕೃತಿಗಳಲ್ಲಿ ವ್ಯಾಪಿಸಿದ್ದಾನೆ. 'ದಾಸಕೂಟ'ದ ಉಮೇಶನಲ್ಲಿ ಬೀಚಿಯವರೇ ಇದ್ದಾರೆ.

ಬೀಚಿಯವರು ಎಲ್ಲಿಯೂ ಅಡಗೂಲಜ್ಜಿಯ ಕಥೆ ಹೇಳುವುದಿಲ್ಲ. ನಿತ್ಯ ಜೀವನದ ಘಟನೆಗಳನ್ನು ತಮ್ಮ ವೈಚಾರಿಕ ನಿಲುವಿನಿಂದ ವಿಶ್ಲೇಷಿಸುತ್ತಾರೆ. ಸಮಕಾಲೀನ ಬದುಕಿನೊಂದಿಗೆ ಸ್ಪಂದಿಸುತ್ತಾರೆ. ಒಬ್ಬ ತತ್ವಜ್ಞಾನಿಯಂತೆ ಒಣ ವೇದಾಂತ ಉಪದೇಶ ಮಾಡುವುದಿಲ್ಲ. ಒಬ್ಬ ಪ್ರವಾದಿಯಂತೆ ಜೀವನದ 'ಸತ್ಯ' ಅನಾವರಣಗೊಳಿಸುತ್ತಾರೆ.

ಸಮಾಜದ ಹುಳುಕು–ಕೊಳಕುಗಳನ್ನು ಮುಚ್ಚಿಡುವುದಿಲ್ಲ. ರಾಜಕಾರಣಿಗಳು, ಸಾಹಿತಿಗಳು, ಮಠಾಧೀಶರು, ಸ್ವಾಮಿಗಳು, ಬಾಬಾಗಳು, ಅವರಿವರೆನ್ನದೆ ಎಲ್ಲರಿಗೂ ಮಾತಿನ ಚಾಟಿಯೇಟು ಕೊಡುತ್ತಾರೆ. [illegible] ಪವಿತ್ರತೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕೇತಗಳು. ಈ ಬಟ್ಟೆಗಳನ್ನು ಧರಿಸಿ ಹೊಲಸು ಕೆಲಸ ಮಾಡುವವರನ್ನು ಬೀಚಿ ಭೀಮಬಲದಿಂದ ಖಂಡಿಸಿದ್ದಾರೆ. ಸೋಮಾರಿಗಳು, ದುಷ್ಟರು, ನೀಚರು, ನಯವಂಚಕರನ್ನು ಕಂಡಾಗ ಬೀಚಿ ಕೆಂಡವಾಗುತ್ತಿದ್ದರು. ಹಾಸ್ಯದ ಹೊದಿಕೆಯಲ್ಲಿ ಸತ್ಯದರ್ಶನ ಮಾಡಿಸಲು ಬೀಚಿ ಹೋರಾಡಿದ್ದಾರೆ. ಅವರ ಹಾಸ್ಯದ ಹಿಂದೆ ಬಾಳಿನ ಸಂಘರ್ಷವಿದೆ, ಜೀವನದ ನೋವು ಇದೆ. ಸಮಷ್ಟಿಯ ಕಳಕಳಿಯಿದೆ. ಅನುಭವದ ವೈಶಾಲ್ಯವಿದೆ.

ಸಾಂಸ್ಕೃತಿಕ ಜೀವನ

'ಭೀಮಸೇನ ವಧಾ' ನಾಟಕವಾಡಿ ತಾಯಿಯಿಂದ ಮೈತುಂಬ ಏಟು ತಿಂದ ಬೀಚಿ ನಾಟಕ ಆಡುವುದನ್ನು ಬಿಟ್ಟರೂ ಧ್ವನಿ–ಭಾವಗಳ ಅನುಕರಣೆ ಮಾಡಿ ಸಂಗಡಿಗರನ್ನು ನಗಿಸುವುದನ್ನು ಬಿಡಲಿಲ್ಲ.

ಇವರು ಏಳೆಂಟು ವರ್ಷದವರಿದ್ದಾಗ ಹರಪನಹಳ್ಳಿಯ ಹಿರಿಯರು ಸೇರಿ ನಾಟಕ ಆಡುವುದನ್ನು ನೋಡಿದ್ದ. ಕುಂಟು ರಾಮಣ್ಣನ ಗೊಂಬೆಯಾಟ 'ಗಯೋಪಾಖ್ಯಾನ' ಇಡೀ ರಾತ್ರಿ ಕುಳಿತು ನೋಡುತ್ತಿದ್ದ. ಸುತ್ತಮುತ್ತಲಿನ ಹಳ್ಳಿಯವರು ಹರಪನಹಳ್ಳಿಗೆ ಬಂದು ಆಡುತ್ತಿದ್ದ ಬಯಲಾಟಗಳೂ ಬೀಚಿಯ ಮೇಲೆ ಪ್ರಭಾವ ಬೀರಿದುವು. ಬಯಲಾಟ–ಗೊಂಬೆಯಾಟಗಳಲ್ಲಿ ಅನಕ್ಷರಸ್ಥರು ಭಾಗವಹಿಸುತ್ತಿದ್ದರೆ, ನಾಟಕಗಳಲ್ಲಿ ಡಾಕ್ಟರರು, ವಕೀಲರು ಮೊದಲಾದ ವಿದ್ಯಾವಂತರೇ ಭಾಗವಹಿಸುತ್ತಿದ್ದರು. 'ಬಳ್ಳಾರಿ ರಾಘವ' ಎಂದು ರಂಗಭೂಮಿಯಲ್ಲಿ ಕಂಪನಿ ಕಟ್ಟಿ ಹೆಸರು ಮಾಡಿದ್ದ ತಾಡಪತ್ರಿ ರಾಘವಾಚಾರ್ಯರು ಅಭಿನಯಿಸಿದ ಹಿರಣ್ಯಕಶಿಪು (ಭಕ್ತಪ್ರಹ್ಲಾದ ನಾಟಕ) ಪಾತ್ರ, ನೋಡಿ ಬೀಚಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಫೂರ್ತಿಗೊಂಡರು. ಮುಂದೆ ಸ್ಥಾನಂ ನರಸಿಂಹರಾಯರು ತೆಲುಗು ನಾಟಕಗಳಲ್ಲಿ ಮಾಡುವ ಸ್ತ್ರೀ ಪಾತ್ರಗಳು ಇವೆಲ್ಲ ಬೀಚಿಯವರ ಬೆಳೆಯುವ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿದುವು.

ಹರಪನಹಳ್ಳಿಯಲ್ಲಿದ್ದ ಮಲೆಬೆನ್ನೂರು ಸತ್ಯವಂತರಾಯರು ಮಕ್ಕಳನ್ನು ಸೇರಿಸಿ ನಾಟಕ ಆಡಿಸುತ್ತಿದ್ದರು. ಆಗ ಎಲ್ಲ ಕಡೆಗೂ ಪೌರಾಣಿಕ ನಾಟಕಗಳನ್ನೇ ಆಡುತ್ತಿದ್ದರು. ಇದಲ್ಲದೆ ಬೇರೆ ಬೇರೆ ಕಲಾವಿಲಾಸಿ ತಂಡಗಳು ನಾಟಕ ಆಡುತ್ತಿದ್ದರು. ಬೀಚಿ ಅವರೊಂದಿಗೆ ಬೆರೆತು ಸಾಧನ-ಸಲಕರಣೆಗಳನ್ನು ಜೋಡಿಸುವಾಗ ಸಹಾಯಮಾಡಿ ನಾಟಕದ ಮಾತು-ತಂತ್ರಗಳನ್ನು ತಿಳಿದುಕೊಳ್ಳುತ್ತಿದ್ದರು.

ಬಳ್ಳಾರಿಗೆ ಬಂದು ಪೊಲೀಸ್ ಖಾತೆ ಸೇರಿದ ಮೇಲೆ ಬೀಚಿಯವರಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಯಿತು. ಇದೇ ಕಾಲಕ್ಕೆ 'ದೇವರ ಆತ್ಮಹತ್ಯೆ' ಎಂಬ ನಾಟಕ ಬರೆದು ತಾನೇ ದೇವರ ಪಾತ್ರ ಧರಿಸಿ ತನ್ನ ಕತ್ತಿನ ಟೈಯಿಂದಲೇ ಉರುಲುಹಾಕಿಕೊಂಡರು. ಈ ನಾಟಕದಿಂದ ಬೀಚಿ ಬಳ್ಳಾರಿ ನಗರದಲ್ಲಿ ಪ್ರಸಿದ್ಧರಾದರು. ಒಂದು ದಿನ ತಾಡಪತ್ರಿ ರಾಘವಾಚಾರ್ಯರೇ ತಮ್ಮ ಮನೆಗೆ ಕರೆಯಿಸಿ ನಾಟಕ ಓದಿಸಿ ಖುಷಿಪಟ್ಟರು. ಊರಿನ ಹಿರಿಯ ಗಣ್ಯರೂ ಬೀಚಿಯವರಿಂದ ನಾಟಕ ವಾಚನ ಮಾಡಿಸಿ 'ಭೇಷ್' ಎಂದರು.

ಬಳ್ಳಾರಿಯಲ್ಲಿ 'ಭಾಸ್ಕರ ಪಂತುಲು' ಎಂದು ಹೆಸರಾಗಿದ್ದ ಭಾಸ್ಕರಾಚಾರ್ಯ ರಾಮಚಂದ್ರ ಸ್ವಾಮಿಗಳು ರಾಜರಾಜೇಶ್ವರಿಯ ಉಪಾಸಕರು. ಶಾಕ್ತ ಸಂಪ್ರದಾಯವನ್ನು ತಿಳಿದು-ಅನುಷ್ಠಾನಕ್ಕೆ ತಂದಿದ್ದರು. ಶಾಕ್ತ ಮಹಾಗ್ರಂಥಗಳ ಕುರಿತು ಅಧಿಕಾರವಾಣಿಯಿಂದ ಮಾತನಾಡುತ್ತಿದ್ದರು. ತೆಲುಗು ಭಾಷೆಯಲ್ಲಿ ಪ್ರಸಿದ್ಧ ಕವಿಗಳೂ ಆಗಿದ್ದರು. 'ಯಾತ್ರಿಕರು' ಎಂಬ ಕಾವ್ಯ ಸಂಗ್ರಹ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಪ್ರಕಟಿಸಿದ್ದರು. ತೆಲುಗಿನ ಕಟ್ಟಾ ಅಭಿಮಾನಿಗಳೂ ಆಗಿದ್ದರು. ಆದರೂ ಕನ್ನಡದ ಖ್ಯಾತರಾದ ಸಿ.ವ. ಚನ್ನಬಸವೇಶ್ವರ, ಜೋಳದರಾಶಿ ದೊಡ್ಡಣ್ಣಗೌಡರು, ಮಾಸ್ಟರ್ ಹಿರಣ್ಣಯ್ಯ, ಕೋ. ಚನ್ನಬಸಪ್ಪ, ಬೀಚಿ ಮೊದಲಾದವರು ಅವರ ಸುತ್ತಲೂ ಇರುತ್ತಿದ್ದರು. ನಿತ್ಯವೂ ಸಾಯಂಕಾಲ ಸಾಹಿತ್ಯ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಚರ್ಚೆಗಳು ನಡೆಯುತ್ತಿತ್ತು. ಭಾಸ್ಕರ ಪಂತುಲು ಅವರಲ್ಲಿ ಎಲ್ಲ ಜಾತಿ ಮತಗಳ ಕುರಿತು ಸಮನ್ವಯ ಭಾವ ಇತ್ತು. ಹಿರಿಯರು ಕಿರಿಯರು ಎಂಬ ತಾರತಮ್ಯವಿಲ್ಲದೆ ಎಲ್ಲರೊಂದಿಗೆ ಬೆರೆತುಕೊಂಡಿರುತ್ತಿದ್ದರು. ಒಮ್ಮೆ ಮಾಸ್ಟರ್ ಹಿರಣ್ಣಯ್ಯ ಹಾಗೂ ಬೀಚಿಯವರು ರಾಜರಾಜೇಶ್ವರಿಯ ಉಪಾಸನೆಯ ದೀಕ್ಷೆ ಭಾಸ್ಕರ ಪಂತುಲು ಅವರಿಂದ ಪಡೆದಿದ್ದರು. ಆದರೆ ಬೀಚಿಯವರು ಮಾತ್ರ ಬಹುಕಾಲ ಈ ಉಪಾಸನೆಯನ್ನು ಮುಂದುವರಿಸಲಿಲ್ಲ.

ಬಳ್ಳಾರಿಯಲ್ಲಿ ಸಿಂಧಗಿ ಗವಿಸಿದ್ದಪ್ಪನವರ ನೇತೃತ್ವದಲ್ಲಿ ನಾಡ ಹಬ್ಬದ ಕಾರ್ಯಕ್ರಮ ನಡೆಯುತ್ತಿತ್ತು. ನೃತ್ಯ–ನಾಟಕ ಸಂಗೀತ ಮೊದಲಾದ ಮನರಂಜನೆಯ ಕಾರ್ಯಕ್ರಮಗಳು ಹತ್ತು ದಿನಗಳು ನಡೆಯುತ್ತಿದ್ದವು. ಕೊನೆಯ ದಿನ ನಾಡಿನ ಪ್ರಸಿದ್ಧ ವಿದ್ವಾಂಸರನ್ನು ಬರಮಾಡಿಕೊಂಡು ಭಾಷಣ ಮಾಡಿಸುತ್ತಿದ್ದರು. ಹೀಗೆ ನಾಡಹಬ್ಬಕ್ಕೆ ಆಹ್ವಾನಿತರಾಗಿ ಬಂದ ಅ.ನ.ಕೃ., ಶಂ.ಬಾ. ಜೋಷಿ, ಬೆಟಗೇರಿ ಕೃಷ್ಣಶರ್ಮ, ರಾಜರತ್ನಂ ಮೊದಲಾದವರು ಬೀಚಿಗೆ ಪರಿಚಿತರಾದರು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿದ ಬೀಚಿಯವರು ಕೆಲವು ಕಾಲ ಮಕ್ಕಳಿಗೆ ನೃತ್ಯಾಭ್ಯಾಸವನ್ನು ಹೇಳಿಕೊಟ್ಟರು.

ಮುಂದೆ ಬಳ್ಳಾರಿಯ ಕೆಲಮಿತ್ರರು ಸೇರಿ 'ಸಾಹಿತ್ಯಮಂಟಪ' ಎಂಬ ಸಂಸ್ಥೆ ಕಟ್ಟಿದರು. ಬೀಚಿ ಮತ್ತು ತಾಳಕೆರೆಪ್ಪನವರು

Sri Vidyabharathi Book Centre, Sringeri.

 CC-O. In Public Domain. Digitized by eGangotri

ಜೋಡಿ ಕಾರ್ಯದರ್ಶಿಗಳು. ಕಾಲೇಜಿನ ಪ್ರಿನ್ಸಿಪಾಲ್ ಪಡುಕೋಣೆ ರಮಾನಂದರಾಯರು–ಅಧ್ಯಕ್ಷರು. ಶಿ. ವ. ಚನ್ನಬಸವೇಶ್ವರ, ಜೋಳದ ರಾಶಿ ದೊಡ್ಡಣ್ಣಗೌಡರು, ದಿ॥ ಕುಮಾರಸ್ವಾಮಿ, ದಿ॥ ಭಾಸ್ಕರ ಪಂತುಲು ಮೊದಲಾದವರು ಸಾಹಿತ್ಯಮಂಟಪದ ಸದಸ್ಯರು. ಈ ಸಂಸ್ಥೆಯಿಂದ ತೆಲುಗು–ಕನ್ನಡ–ಉರ್ದು ಭಾಷೆಯ ಕವಿಸಮ್ಮೇಲನ ಸೇರಿಸುವುದು, ಸಾಹಿತ್ಯ ಚರ್ಚೆಗಳನ್ನು ಏರ್ಪಡಿಸುತ್ತಿದ್ದರು. ಸಾಹಿತ್ಯಮಂಟಪದ ಚಟುವಟಿಕೆಗಳಿಂದ ಬೀಚಿಯವರಲ್ಲಿ ಭಾಷಣ ಮಾಡುವ ಆಸಕ್ತಿ ಬೆಳೆಯಿತು.

ಮದ್ರಾಸಿಗೆ ವರ್ಗವಾಗಿ ಹೋದಾಗ ಬೀಚಿಯವರಿಗೆ ಪಿ.ಕಾಳಿಂಗರಾಯರು, ಚಲನಚಿತ್ರದ ಖ್ಯಾತನಟರೂ ನಿರ್ದೇಶಕರೂ ಆದ ಬಿ.ಆರ್. ಪಂತುಲು ಮೊದಲಾದವರ ಪರಿಚಯ ಬೆಳೆಯಿತು. ಇವರೆಲ್ಲ ಸೇರಿ 'ರಾಯರ ಸೊಸೆ' ಎಂಬ ನಾಟಕ ಆಡಿದರು. ಮೋಹನಕುಮಾರಿ — ಸೋಹನಕುಮಾರಿಯರೂ ಪಾತ್ರ ನಿರ್ವಹಿಸಿದ್ದರು.

ಮದ್ರಾಸ್ ಆಕಾಶವಾಣಿಯ ನಿರ್ದೇಶಕರು ಹಾಗೂ ಕನ್ನಡ ವಿಭಾಗದ ಪ್ರಮುಖರಿಂದ ಪ್ರೇರಿತರಾಗಿ 'ವಧು ಪರೀಕ್ಷೆ' ಎಂಬ ಹಾಸ್ಯನಾಟಕ ಬಾನುಲಿ ಕೇಂದ್ರದಲ್ಲಿ ಅಭಿನಯಿಸಿದರು. ಅನಂತರ ಬೀಚಿಯವರೇ ಬರೆದ 'ಏಕೀಕರಣ' 'ಏಕೋದರ' ಎಂಬ ನಾಟಕಗಳು ಅದೇ ಬಾನುಲಿ ಕೇಂದ್ರದಿಂದ ಬಿತ್ತರಗೊಂಡವು. ಬೀಚಿ ಎಲ್ಲ ನಾಟಕಗಳಲ್ಲೂ ಪಾತ್ರವಹಿಸಿದರು. ಒಮ್ಮೆ 'ಸೈಕಾಲಜಿಸ್ಟ್ ಸಾರಂಗಪಾಣಿ' ಎಂಬ ಇವರೇ ಬರೆದ ನಾಟಕ ಬಾನುಲಿಯಲ್ಲಿ ಬಿತ್ತರಗೊಳ್ಳಬೇಕಾಗಿತ್ತು. ಸ್ತ್ರೀ ಪಾತ್ರಧಾರಿಗಳು ಸಿಗಲಿಲ್ಲ. ಕಡೆಗೆ ತನ್ನ ಹೆಂಡತಿ ಶ್ರೀಮತಿ ಸೀತಾಬಾಯಿಯವರನ್ನೇ ಕರೆದೊಯ್ದು ಪಾತ್ರ ಮಾಡಿಸಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಬೀಚಿಯುವರು ಬಳ್ಳಾರಿ – ಮದ್ರಾಸುಗಳಲ್ಲಿದ್ದಾಗ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಸಾಹಿತ್ಯ, ಸಂಗೀತ, ನೃತ್ಯ, ನಾಟಕಗಳಲ್ಲಿ ಅಭಿರುಚಿ ಬೆಳೆಯಿತು.

ಬೆಂಗಳೂರಿಗೆ ಬಂದ ಬಳಿಕ 1972–73ರ ಸುಮಾರಿಗೆ 'ವಿಚಾರವಂತರ ಸಂಘ'ವನ್ನು ಕಟ್ಟಿದರು. ಕೆಲವು ಕಾಲ ಈ ಸಂಸ್ಥೆಯ ಅಧ್ಯಕ್ಷರೂ ಆಗಿದ್ದರು. ಪುರೋಗಾಮಿ ವಿಚಾರ ಸರಣಿಯ ಜನರು ತಿಂಗಳಿಗೊಮ್ಮೆ ಸಭೆ ಸೇರಿ ಚರ್ಚಿಸುತ್ತಿದ್ದರು. ವೈಚಾರಿಕ ಜಾಗೃತಿ ಮೂಲ ಉದ್ದೇಶವಾಗಿತ್ತು.

ಭಾಷಣ ಚತುರ

ಇವರ ಸಾಹಿತ್ಯದಲ್ಲಿ ಹಾಸ್ಯರಸ ಹೊಮ್ಮುವಂತೆ, ಭಾಷಣಗಳಲ್ಲೂ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಿದ್ದರು. ಬಳ್ಳಾರಿಗೆ ಬಂದ ಅ.ನ. ಕೃಷ್ಣರಾಯರ ಭಾಷಣದಿಂದ ಪ್ರಭಾವಿತರಾದ ಬೀಚಿ ಪರಿಣಾಮಕಾರಿಯಾಗಿ ಭಾಷಣ ಮಾಡುವುದನ್ನು ರೂಢಿಸಿಕೊಂಡಿದ್ದರು.

ಇವರ ಪ್ರಥಮ ಭಾಷಣ ಮದ್ರಾಸಿನಲ್ಲಿ. ಒಮ್ಮೆ ಅವರ ಖಾತೆಯ ನೌಕರರು ಸತ್ಯಾಗ್ರಹದಲ್ಲಿ ಪಾಲ್ಗೊಂಡಾಗ ನೌಕರರ ಮುಂದಾಳು ಬೀಚಿಯುವರು ಇಂಗ್ಲಿಷಿನಲ್ಲಿ ಭಾಷಣ ಮಾಡಿದ್ದರು. ಅನಂತರ ಬಳ್ಳಾರಿಯ ಸಾಂಸ್ಕೃತಿಕ ಚಟುವಟಿಕೆಗಳ ಸಂದರ್ಭದಲ್ಲಿ ಇವರು ಮಾತನಾಡಿದ್ದಾರೆ. ಲಯನ್ಸ್, ರೋಟರಿ ಮೊದಲಾದ ಸಾಂಸ್ಕೃತಿಕ ಸಂಘ–ಸಂಸ್ಥೆಗಳಲ್ಲಿ ಭಾಷಣ ಮಾಡಿದ್ದಾರೆ. ಕನ್ನಡದಲ್ಲಿ ಪ್ರಪ್ರಥಮ ಭಾಷಣ ಮಾಡಿದ್ದು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ. ಇವರು ಬರೆದ 'ಹನ್ನೊಂದನೆ ಅವತಾರ' ಓದಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ.ಸ. ಮಾಳವಾಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಮುಂದೆ ಇವರು ಹುಬ್ಬಳ್ಳಿ, ಗದಗ, ಧಾರವಾಡ, ದಿಲ್ಲಿ, ಗೋವಾ, ರಶಿಯ ಗಳಲ್ಲಿ ಭಾಷಣ ಮಾಡಿ ಹಾಸ್ಯದ ಹೊಳೆ ಹರಿಸಿದ್ದಾರೆ.

ಇವರಿಗೆ ಅರವತ್ತು ವರ್ಷಗಳು ತುಂಬಿದಾಗ ಕರ್ನಾಟಕದ ಅನೇಕ ಕಡೆಗಳಲ್ಲಿ ಸತ್ಕಾರ ಸಮಾರಂಭಗಳು ನಡೆದುವು. ಅಲ್ಲದೆ ಹಮ್ಮಿಣಿ ಹಾಗೂ ಮಾನಪತ್ರಗಳನ್ನು ನೀಡಿ ಗೌರವಿಸಿದರು. ಬೆಳಗಾಂವ ಕನ್ನಡಿಗರು 'ತಿಂಮಾಯಣ' ಎಂಬ ಗೌರವಗ್ರಂಥ ವನ್ನು, ಕನ್ನಡಿಗರ ಪರವಾಗಿ ಮತ್ತೊಂದು ಅಭಿನಂದನ ಗ್ರಂಥ 'ತಿಂಮದರ್ಶನ' ಬೀಚಿಯವರಿಗೆ ಅರ್ಪಿಸಿ ತಮ್ಮ ಪ್ರೀತಿ-ಗೌರವ ಗಳನ್ನು ವ್ಯಕ್ತಪಡಿಸಿದರು.

ಬೀಚಿಯವರು ತಮ್ಮ ಹೆಸರನ್ನು ಬೀChi ಎಂದು ಕನ್ನಡಾಂಗ್ಲಮಯವಾಗಿ ಬರೆಯುತ್ತಿದ್ದರು. ಅದಕ್ಕೆ ಅವರು "ನನ್ನ ಮಾತೃಭಾಷೆ ಕನ್ನಡ, ನನ್ನ ಪಿತೃಭಾಷೆ ಇಂಗ್ಲಿಷ್. ಆದು ದರಿಂದಲೇ ನಾನು ನನ್ನ ಹೆಸರಿನಲ್ಲಿ ಎರಡು ಭಾಷೆಯ ಅಕ್ಷರ ಸೇರಿಸಿದ್ದೇನೆ" ಎನ್ನುತ್ತಿದ್ದರು. ಅದು ನಿಜ. ಬೀಚಿ ಓದಿದ್ದು ಬಹುಪಾಲು ಇಂಗ್ಲಿಷ್-ಬರೆದುದು ಕನ್ನಡದಲ್ಲಿ ಮಾತ್ರ.

ಕವಿ ಇಂಚಲರು ಹೇಳುವಂತೆ "ನಗೆಯು ಜೀವನವಾಗಿ ಜೀವ ನವೇ ನಗೆಯಾಗಿ ಬಾಳಬಯಸಿ"ದವರು ಬೀಚಿ. ಬೀಚಿಯ ನೆನಪಾ ದೊಡನೆ ಕನ್ನಡ ಹಾಸ್ಯ ಸಾಹಿತ್ಯದಲ್ಲಿ ಅವರು ಮಾಡಿದ ಕೃಷಿಯು ನೆನಪಾಗುತ್ತದೆ. ಅವರ ಸತ್ಯನಿಷ್ಠುರತೆ, ಮಾನವೀಯತೆ, ವೈಚಾ ರಿಕ ಮನೋಭಾವ ಎದ್ದು ಕಾಣುತ್ತವೆ.

ಬೀಚಿ ಕರುಳಿನ ಹುಣ್ಣಿನಿಂದ ಎಂಟು-ಹತ್ತು ವರ್ಷ ನರಳಿ ದರು. ಆಗಲೂ ಬರವಣಿಗೆಯ ಹಾಸ್ಯ ಬತ್ತಲಿಲ್ಲ. ನೋವಿ ನಲ್ಲಿಯೂ ನಗೆಯುಕ್ಕಿಸಿದ ಬೀಚಿಯವರು 1980 ಡಿಸೆಂಬರ್

Sri Vidyabharathi Book Centre, Sringeri

CC-O. In Public Domain. Digitized by eGangotri

ಏಳನೆಯ ದಿನ ಬೆಂಗಳೂರಿನ ತಿಂಮನ ಮನೆಯಲ್ಲಿ ತಮ್ಮ ನಗುವನ್ನು ಚಿರಕಾಲ ನಿಲ್ಲಿಸಿದರು. ಸಹಸ್ರಾರು ಕನ್ನಡಿಗರು ಆಗ ಅತ್ತರು. ಕನ್ನಡ ಸಾಹಿತ್ಯದಲ್ಲಿ ಅವರು ಮಾಡಿದ ಸೇವೆಯನ್ನು ಮನ್ನಿಸಿ 'ಕರ್ನಾಟಕದ ಸಾಹಿತ್ಯ ಅಕಾಡೆಮಿ' ಅವರಿಗೆ ಮರಣೋತ್ತರ ಪ್ರಶಸ್ತಿ 1981ರಲ್ಲಿ ನೀಡಿ ಗೌರವಿಸಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ನಾಡು ಮತ್ತು ಕನ್ನಡಿಗರ ಪರಂಪರೆ ಮಾಲೆಯ
ಇತ್ತೀಚಿನ ಪ್ರಕಟಣೆಗಳು

ರಾಘವೇಂದ್ರರಾವ್ ಭೀ. ದೇಸಾಯಿ	ಚಂದ್ರಕಾಂತ ಕುಸನೂರ, ಬಂಡೇರಂಗರಾವ್ ಸರ್‌ಮುಖದ್ದಮ್
ಸುಡುಗಾಡು ಸಿದ್ದರು	ಬಸವರಾಜ ನೆಲ್ಲಿಸರ
ಕರ್ನಾಟಕದ ಗ್ರಾಮದೇವತೆಗಳು	ಡಿ. ಲಿಂಗಯ್ಯ
ಬಿ. ಸೂರ್ಯನಾರಾಯಣ ರಾಯರು	ಎನ್. ಎಸ್. ಸೀತಾರಾಮ ಶಾಸ್ತ್ರಿ
ಕಿಳ್ಳೆಕ್ಯಾತರು	ಬೆನಕನಹಳ್ಳಿ ಜಿ. ನಾಯಕ್
ಮದಗದ ಕೆರೆ	ಬಳ್ಳೇಕೆರೆ ಹನುಮಂತಪ್ಪ
ಮಾನ್ಯಖೇಟ	ವಸಂತ ಕುಷ್ಟಗಿ
ಅಘನಾಶಿನಿ	ಗೋಪಾಲಕೃಷ್ಣ ಹೆಗಡೆ
ಕರ್ನಾಟಕದಲ್ಲಿ ಚಿನ್ನ ಬೆಳ್ಳಿಯ ಕುಶಲ ಕೈಗಾರಿಕೆ	ಆರ್. ಜಿ. ರಾಯಕರ
ಶ್ರೀ ಸುರೇಶ್ವರಾಚಾರ್ಯರು	ಲ. ನ. ಶಾಸ್ತ್ರೀ
ಜೇವರಗಿ ಶ್ರೀ ಷಣ್ಮುಖ ಶಿವಯೋಗಿಗಳು	ಮೋಹನಚಂದ ಕೀರಣಗಿ
ಮಧುಗಿರಿ	ನೀ. ಕೃ. ರಾಮಶೇಷನ್
ಆಸಾದಿಗಳು	ಬಸವರಾಜ ನೆಲ್ಲಿಸರ
ಮೊಹರಂ ಪದಗಳು	ದಸ್ತಗೀರ್ ಅಲ್ಲೀಭಾಯಿ
ಶ್ರೀ ಚಿದಾನಂದಾವಧೂತರು	ಕೆ. ಜಗನ್ನಾಥಶಾಸ್ತ್ರಿ
ಸಂಪನ್ಮೂಲಗಳು ಮತ್ತು ಕೈಗಾರಿಕಾವಕಾಶಗಳು ಚಿಕ್ಕಮಗಳೂರು ಜಿಲ್ಲೆ	ಬೆ. ಗೋ. ರಮೇಶ್

ಪ್ರತಿ ಪುಸ್ತಕದ ಬೆಲೆ : ರೂ. 2-00

Sri Vidyabharathi Book Centre, Sringeri